ಕರಾವರ್ಕೇಗಾಗಿ

ಶ್ರೀಮದಾಶ್ವಲಾಯನ

ಸಂಧ್ಯೋಪಾಸನೆ

★

ಪ್ರಕಟಿಸಿದವರು :

ಮಂಟಪ ರಾಮ ಉಪಾಧ್ಯ,

ಸಾಲಿಗ್ರಾಮ, ಉಡುಪಿ, ದ. ಕ. 576 225.

ಸಂಧ್ಯಾವಂದನಮ್

ಬೆಳಿಗ್ಗೆ ಪೂರ್ವ / ಸಂಜೆ ಪಶ್ಚಿಮ ಅಥವಾ ಉತ್ತರ ಮುಖವಾಗಿ ಕುಳಿತುಕೊಳ್ಳುವುದು. ಕೈಗಳು ಕಾಲುಗಳ ಹೊರಕ್ಕೆ ಮೀರಕೂಡದು. ❋ರ ಅರ್ಥಕ್ಕೆ ಪುಟ 24 ನೋಡಿರಿ.

ಧ್ಯಾನಸ್ನಾನಮ್

ಶ್ರೀ ವಿಷ್ಣುವನ್ನು ಸ್ಮರಿಸಿ ತಲೆಯ ಮೇಲೆ ನೀರನ್ನು ಪ್ರೋಕ್ಷಿಸುತ್ತ ಹೇಳುವುದು.

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥

ಆಚಮನಮ್

ಬಲಗೈ ಅಂಗುಷ್ಠದ ತುದಿಯನ್ನು ನಡುಬೆರಳ ಮಧ್ಯಗಂಟಿಗೆ ತಗಲಿಸಿ ಅಂಗೈಯನ್ನು ಗೋಕರ್ಣಾಕೃತಿಮಾಡಿ, ಕನಿಷ್ಠಬೆರಳನ್ನು ಪ್ರತ್ಯೇಕಿಸಿ, ಎದೆಗೆ ಇಳಿಯುವಷ್ಟು ನೀರನ್ನು ಹಾಕಿಕೊಂಡು ಬ್ರಹ್ಮತೀರ್ಥವೆನಿಸುವ ಅಂಗುಷ್ಠ ಮೂಲದಿಂದ ಶಬ್ದವಾಗದಂತೆ ಕೆಳಗೆ ಹೇಳಿದ ಒಂದೊಂದು ವೇದಕ್ಕೆ ಒಂದೊಂದು ಸಾರಿಯಂತೆ ಮೂರು ಸಾರಿ ನೀರು ಕುಡಿಯುವುದು.

ಓಂ ಋಗ್ವೇದಾಯ ಸ್ವಾಹಾ । ಓಂ ಯಜುರ್ವೇದಾಯ ಸ್ವಾಹಾ । ಓಂ ಸಾಮವೇದಾಯ ಸ್ವಾಹಾ ।

ಬಲಕೈ ಬೆರಳುಗಳ ತುದಿಗೆ ನೀರುಹಾಕಿ ಒದ್ದೆಮಾಡಿಕೊಂಡು ಮುಂದೆ ಹೇಳುವ ಅಂಗಗಳನ್ನು ಮುಟ್ಟಬೇಕು

ಅಥರ್ವಣ ವೇದಾಯ ನಮಃ । ಇತಿಹಾಸಪುರಾಣೇಭ್ಯೋ ನಮಃ ।

ಬಲಗೈ ಅಂಗುಷ್ಟ ಮೂಲದಿಂದ ಬಲದಿಂದ ಎಡಕ್ಕೆ ಕೆಳ ತುಟಿಯನ್ನೂ ಎಡದಿಂದ ಬಲಕ್ಕೆ ಮೇಲಿನ ತುಟಿಯನ್ನೂ ಸವರುವುದು. ಇದರ ಬಗ್ಗೆ ಬಲ ಅಂಗೈ ಕವಚಿ ಎಡ ಅಂಗೈ ಮುಂಭಾಗ ಸವರುವುದು. ಎಡ ಅಂಗೈ ಕವಚಿ ಬಲ ಅಂಗೈ ಸವರುವ ಸಂಪ್ರದಾಯವೂ ಉಂಟು.

ಅಗ್ನೀಯ ನಮಃ । ಅಂಗೈಯಿಂದ ತುಟಿ ಮುಟ್ಟುವುದು.

ಸೂರ್ಯಾಯ ನಮಃ । ಚಂದ್ರಾಯ ನಮಃ ಹೆಬ್ಬೆಟ್ಟು ತರ್ಜನಿ ಬೆಟ್ಟುಗಳ ತುದಿ ಕೂಡಿಸಿ ಬಲ ಮತ್ತು ಎಡ ಕಣ್ಣುಗಳನ್ನು ಮುಟ್ಟುವುದು.

ವಾಯುವೇ ನಮಃ । ವಾಯುವೇ ನಮಃ । ಹೆಬ್ಬೆಟ್ಟು ಮಧ್ಯಮ ಬೆಟ್ಟುಗಳ ತುದಿ ಕೂಡಿಸಿ ಬಲ ಮತ್ತು ಎಡ ಮೂಗಿನ ದ್ವಾರಗಳನ್ನು ಮುಟ್ಟುವುದು.

ದಿಗ್ಭ್ಯೋ ನಮಃ । ದಿಗ್ಭ್ಯೋ ನಮಃ ಹೆಬ್ಬೆಟ್ಟು ಅನಾಮಿಕ ಬೆಟ್ಟುಗಳ ತುದಿ ಕೂಡಿಸಿ ಬಲ ಮತ್ತು ಎಡ ಕಿವಿಗಳನ್ನು ಮುಟ್ಟುವುದು.

ಇಂದ್ರಾಯ ನಮಃ । ಇಂದ್ರಾಯ ನಮಃ । ಹೆಬ್ಬೆಟ್ಟು ಮತ್ತು ಕಿರು ಬೆಟ್ಟುಗಳ ತುದಿ ಕೂಡಿಸಿ ಬಲ ಮತ್ತು ಎಡ ಭುಜಗಳನ್ನು ಮುಟ್ಟುವುದು.

ಪೃಥಿವ್ಯೈ ನಮಃ । ಪೃಥಿವ್ಯೈ ನಮಃ ಃ ಎಲ್ಲಾ ಬೆರಳುಗಳಿಂದ ಪಾದ

ಅಂತರಿಕ್ಷಾಯ ನಮಃ । ಅಂತರಿಕ್ಷಾಯ ನಮಃ । ಎಲ್ಲಾ ಬೆರಳುಗಳಿಂದ ಮೊಣಕಾಲ ಗಂಟುಗಳನ್ನು ಮುಟ್ಟುವುದು.

ದಿವೇ ನಮಃ । ಎಲ್ಲಾ ಬೆರಳುಗಳಿಂದ ಲಿಂಗಸ್ಥಾನವನ್ನು ಮುಟ್ಟುವುದು.

ಬ್ರಹ್ಮಣೇ ನಮಃ । ,, ಹೊಕ್ಕುಳನ್ನು ,,

ವಿಷ್ಣವೇ ನಮಃ । ,, ಹೃದಯವನ್ನು ,,

ಶಿವಾಯ ನಮಃ । , ತಲೆಯನ್ನು ,,

ಹೀಗೆಯೇ ಇನ್ನೊಂದು ಬಾರಿ ಆಚಮನ ಮಾಡಬೇಕು.

ಭಸ್ಮಧಾರಣಮ್

ಮಾನಸ್ತೋಕೇ ಕುತ್ಸೋ ರುದ್ರೋ ಜಗತೀ ಭಸ್ಮಧಾರಣೇ ವಿನಿಯೋಗಃ ॥ ಭಸ್ಮ ಬಲ ಅಂಗೈಗೆ ಹಾಕಿ ನೀರು ಸೇರಿಸಿ ಎರಡೂ ಅಂಗೈಗಳ ನಡುವೆ ಉಜ್ಜಿ ಅನಾಮಿಕ, ಮಧ್ಯಮ ಮತ್ತು ತರ್ಜನಿ ಬೆರಳುಗಳಿಗೆ ಚೆನ್ನಾಗಿ ಹಿಡಿಯುವಂತೆ ಮಾಡುವುದು. ಸಂಜೆ ಭಸ್ಮಕ್ಕೆ ನೀರು ಬೇಡ.

ಮಾನಸ್ತೋಕೇ ತನಯೇ ಮಾನ ಆಯೌಮಾನೋ ಗೋಷು

ಮಾನೋ ಅಶ್ವೇಷು ರೀರಿಷಃ । ವೀರಾನ್ಮಾನೋ ರುದ್ರಭಾಮಿ

ತೋವಧೀರ್ಹವಿಷ್ಮಂತಃ ಸದಮಿತ್ವಾ ಹವಾಮಹೇ ॥ ಋ ೧-೮-೬

ಮೇಲೆ ಹೇಳಿದ ಮೂರು ಬೆರಳುಗಳಿಂದ ಭಸ್ಮ ಹಚ್ಚಿಕೊಳ್ಳುವುದು. **(ತ್ರ್ಯಂಬಕಂ) ಜಮದಗ್ನೇರಿತಿ ಲಲಾಟೇ** ಹಣೆಗೆ । **ಕಶ್ಯಪಸ್ಯ ತ್ರ್ಯಾಯುಷಮಿತಿ ಕಂಠೇ** ಕುತ್ತಿಗೆಗೆ । **ಅಗಸ್ತ್ಯಸ್ಯ ತ್ರ್ಯಾಯುಷಮಿತಿ ನಾಭೌ** ಹೊಕ್ಕುಳ ಸ್ಥಾನಕ್ಕೆ । **ಯದ್ದೇವಾನಾಂ ತ್ರ್ಯಾಯುಷಮಿತಿ ದಕ್ಷಿಣಭುಜೇ** ಬಲ ಭುಜಕ್ಕೆ । **ತನ್ಮೇ ಅಸ್ತು ತ್ರ್ಯಾಯುಷಮಿತಿ ವಾಮಭುಜೇ** ಎಡ ಭುಜಕ್ಕೆ। **ಶತಾಯುಷಮಿತಿ ಶಿರಸಿ** ತಲೆಗೆ । **ಬಲಾಯುಷಮಿತಿ ಸರ್ವಾಂಗೇಷು।**

ಸರ್ವಾಂಗೇಷು । ಕೈಗಂಟುಗಳ ಮೇಲೆ ಮತ್ತು ಕೆಳಗೆ, ಹೃದಯಕ್ಕೆ ಮತ್ತು ಎದೆಯ ಎರಡೂ ಬದಿಗಳಿಗೆ ಮತ್ತು ಬೆನ್ನಿಗೆ ಭಸ್ಮ ಹಚ್ಚುವುದು. ಕೈಗಳನ್ನು ತೊಳೆದು ಎರಡು ಬಾರಿ **ಆಚಮನ** ಮಾಡವುದು.

ಪ್ರಾಣಾಯಾಮಃ

ಪ್ರಣವಸ್ಯ ಪರಬ್ರಹ್ಮ ಋಷಿಃ ತಲೆ ಮುಟ್ಟುವುದು. । **ಪರಮಾತ್ಮಾ ದೇವತಾ** ಎದೆ ಮುಟ್ಟುವುದು. **ದೈವೀ ಗಾಯಿತ್ರೀಛಂದಃ** ಬಾಯಿ ಮುಟ್ಟುವುದು । **ಪ್ರಾಣಾಯಾಮೇ ವಿನಿಯೋಗಃ ॥**

ನಡು ಮತ್ತು ತರ್ಜನಿ ಬೆರಳುಗಳನ್ನು ನೀಡಿಸಿ, ಕನಿಷ್ಟ ಮತ್ತು ಅನಾಮಿಕ ಬೆರಳುಗಳಿಂದ ಎಡ ಮೂಗನ್ನೂ, ಅಂಗುಷ್ಟದಿಂದ ಬಲ ಮೂಗನ್ನೂ ಹಿಡಿದು ಬಲ ದ್ವಾರದಿಂದ ಶ್ವಾಸ ಎಳೆದು ಎದೆ ತುಂಬಿಸಿಕೊಂಡು (ಪೂರಕ) ಎರಡು ದ್ವಾರಗಳನ್ನು ಬಿಮ್ಮಗೆ ಹಿಡಿದು (ಕುಂಭಕ) ಕೆಳಗೆ ಹೇಳಿದ ಸಪ್ತವ್ಯಾಹೃತಿ, ಗಾಯತ್ರೀ, ಶಿರಸ್ಸು ಮಂತ್ರಗಳನ್ನು ಮೂರು ಸಾರಿ ಸ್ಮರಿಸುವುದು.

ಓಂ ಭೂಃ । ಓಂ ಭುವಃ । ಓಂ ಸುವಃ । ಓಂ ಮಹಃ । ಓಂ ಜನಃ । ಓಂ ತಪಃ । ಓಂ ಸತ್ಯಂ ॥ ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್ । ಓಮಾಪೋಜ್ಯೋತೀ ರಸೋಽಮೃತಂ ಬ್ರಹ್ಮಭೂರ್ಭುವಸ್ಸುವರೋಂ ॥ ತೈ ಆ. ನಾ. ೧೫ ಆ ಮೇಲೆ ಎಡ ದ್ವಾರದಿಂದ ನಿಧಾನವಾಗಿ ಶ್ವಾಸಬಿಡುವುದು. (ರೇಚಕ)

ಸಂಕಲ್ಪಃ

ಬಲಗೈಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಶಿರಸ್ಸಿನ ಸುತ್ತ ಪ್ರದಕ್ಷಿಣೆ ತಂದು ಬಲ ಮೊಣಕಾಲ ಗಂಟಿನಮೇಲೆ ನೆಕ್ಕನೆ ಇಟ್ಟು ನೀರನ್ನು ಸುರಿದು ಬಲ ಕೈ ಮುಚ್ಚಿ ಹೇಳುವುದು.

ಮಮೋಪಾತ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ

ಪ್ರಾತಃ/ಸಾಯಂ ಸಂಧ್ಯಾಮುಪಾಸಿಷ್ಯೇ॥ ನೀರನ್ನು ಬಿಡುವುದು.

ಮಾರ್ಜನಮ್

ಆಪೋಹಿಷ್ಠೇತಿ ತ್ರ್ಯೃಚಸ್ಯ ಸೂಕ್ತಸ್ಯ ಅಂಬರೀಷಃ ಸಿಂಧುದ್ವೀಪ ಋಷಿಃ ಆಪೋದೇವತಾ । ಗಾಯತ್ರೀಛಂದಃ । ಮಾರ್ಜನೇ ವಿನಿಯೋಗಃ ॥

ಎಡ ಕೈಯಲ್ಲಿ ಚೌಟಲ್ಲಿ ನೀರನ್ನು ಹಿಡಕೊಂಡು ಎರಡು ದರ್ಭೆಗಳಿಂದ ಅಥವಾ ಬಲಗೈಯ್ಯ ಅಂಗುಷ್ಟ ಅನಾಮಿಕ ಮತ್ತು ನಡು ಬೆರಳುಗಳಿಂದ ಪ್ರೋಕ್ಷಿಸುತ್ತ ಹೇಳುವುದು.

ಓಂ ಆಪೋಹಿಷ್ಠಾ ಮಯೋ ಭುವಃ (ಹೃದಯಕ್ಕೆ) ತಾನ ಊರ್ಜೇ ದಧಾತನ (ಎದೆಯ ಕೆಳಕ್ಕೆ) । ಮಹೇರಣಾಯ ಚಕ್ಷಸೇ॥ (ಎದೆಯ ಮೇಲ್ಭಾಗಕ್ಕೆ) । ಯೋವಃ ಶಿವತಮೋರಸಃ (ಬಲ ಪಾರ್ಶ್ವಕ್ಕೆ) ತಸ್ಯ ಭಾಜಯತೇಹನಃ (ಎಡ ಭಾಗಕ್ಕೆ) । ಉಶತೀರಿವ ಮಾತರಃ (ಬೆನ್ನಿಗೆ) । ತಸ್ಮಾ ಅರಂಗಮಾಮವೋ (ಮುಖಕ್ಕೆ) । ಯಸ್ಯಕ್ಷಯಾಯ ಜಿನ್ವಥ (ಕೆಳಸ್ಥಳಕ್ಕೆ) । ಆಪೋ ಜನಯಥಾ ಚನಃ ಸರ್ವಾಂಗಕ್ಕೆ ॥

ಋ. ೭–೬–೫.(ಈ ಮಂತ್ರದಿಂದ ಮಾರ್ಜನೆಮಾಡಿಕೊಂಡು ಗೋಕರ್ಣಾಕೃತಿ ಯಿಂದ ನೀರು ಹಿಡಿದುಕೊಂಡು

ಪ್ರಾತಃ/ಸಾಯಂ ಮಂತ್ರಾಚಮನಮ್

ಸೂರ್ಯಶ್ಚೇ/ಅಗ್ನಿಶ್ಚೇ ತ್ಯಸ್ಯಮಂತ್ರಸ್ಯ। ಯಾಜ್ಞವಲ್ಕ್ಯ ಉಪನಿಷದ ಋಷಿಃ ॥ ಸೂರ್ಯ/ಅಗ್ನಿ ಮಾಮನ್ಯು ಮನ್ಯುಪತಯೋದೇವತಾಃ ಪ್ರಕೃತಿಶ್ಛಂದಃ । ಅಭ್ಯಂತರಶುದ್ಧ್ಯರ್ಥೇ ಮಂತ್ರಾಚಮನೇ ವಿನಿಯೋಗಃ॥

ಬಲಗೈಯಲ್ಲಿ ಗೋಕರ್ಣಾಕೃತಿ ಹಸ್ತದಲ್ಲಿ ನೀರನ್ನು ಹಿಡಕೊಂಡು ಓಂ ಸೂರ್ಯಶ್ಚ/ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ

ಪಾಪೇಭ್ಯೋ ರಕ್ಷಂತಾಂ । ಯದ್ರಾತ್ರಿಯಾ / ಯದಹ್ನಾ ಪಾಪಮಕಾರ್ಷಮ್ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿ / ಅಹ ಸ್ತದವಲುಂಪತು ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ ಸೂರ್ಯೇ / ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ॥

ತೈ. ನಾರಾಯಣೀಯಾಯಾಜ್ಞಿಕ್ಯುಪನಿಷತ್ ೩೨.

ಪ್ರಾಶನಮಾಡಿ(ಎರಡು ಸಾರಿ) ಆಚಮನಮಾಡಿ ಪುನಃ

ದ್ವಿತೀಯ ಮಾರ್ಜನಮ್

"ಆಪೋಹಿಷ್ಠಾ" ದಿಂದ "ಜನಯಥಾಚನ" ವರೆಗಿನ ಮಾರ್ಜನ ಮಂತ್ರವನ್ನೇ ಹೇಳುವುದು. ಅಥವಾ ಅದಕ್ಕಿಂತ ಉತ್ತಮವಾಗಿ:—

ಆಪೋಹಿಷ್ಠೇತಿ ನವರ್ಚಸ್ಯ ಸೂಕ್ತಸ್ಯ ಅಂಬರೀಷಃ ಸಿಂಧುದ್ವೀಪ ಋಷಿಃ ಆಪೋದೇವತಾ ಗಾಯತ್ರೀ ಛಂದಃ । ಪಂಚಮ್ಯಾಃ ವರ್ಧಮಾನಾ ಗಾಯತ್ರೀ ಛಂದಃ । ಸಪ್ತಮ್ಯಾಃ ಪ್ರತಿಷ್ಠಾ ಗಾಯತ್ರೀ ಛಂದಃ॥ ಅಷ್ಟಮಿ ನವಮ್ಯೋಃ ಅನುಷ್ಟುಪ್ ಛಂದಃ ॥ ಮಾರ್ಜನೇ ವಿನಿಯೋಗಃ ॥

ಎಡ ಕೈಯಲ್ಲಿ ಪಾಟಲ್ಲಿ ನೀರನ್ನು ಹಿಡಕೊಂಡು ಬಲಗೈಯ ಅಂಗುಷ್ಠ ಅನಾಮಿಕ ಮತ್ತು ನಡುಬೆರಳುಗಳಿಂದ ಚೆನ್ನಾಗಿ ಪ್ರೋಕ್ಷಿಸುತ್ತಃ

ಆಪೋಹಿಷ್ಠಾ ಮಯೋಭುವಸ್ತಾನಊರ್ಜೇದಧಾತನ । ಮಹೇರಣಾಯ ಚಕ್ಷಸೇ (ಹೃದಯಕ್ಕೆ) ॥೧॥ ಯೋ ವಃ ಶಿವತಮೋರಸಸ್ತಸ್ಯ ಭಾಜಯತೇಹನಃ । ಉಶತೀರಿವ ಮಾತರಃ (ಹೃದಯದಕೆಳಕ್ಕೆ) ॥೨॥ ತಸ್ಮಾ ಅರಂಗ ಮಾಮವೋ ಯಸ್ಯ ಕ್ಷಯಾಯ ಜಿನ್ವಥ ।

ಆಪೋ ಜನಯಥಾಚನಃ (ಹೃದಯದ ಮೇಲೆ) ॥ ೩ ॥ ಶಂನೋದೇವೀ ರಭಿಷ್ಟಯ ಆಪೋ ಭವಂತು ಪೀತಯೇ । ಶಂಯೋರಭಿಸ್ರವಂತುನಃ (ಬಲ ಭಾಗಕ್ಕೆ) ॥ ೪ ॥ ಈಶಾನಾ ವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಮ್ । ಅಪೋ ಯಾಚಾಮಿ ಭೇಷಜಂ (ಎಡಬಾಗಕ್ಕೆ) ॥ ೫ ॥ ಅಪ್ಸುಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ । ಅಗ್ನಿಂಚ ವಿಶ್ವಶಂಭುವಮ್ (ಬೆನ್ನಿಗೆ) ॥ ೬ ಆಪಃ ಪೃಣೀತ ಭೇಷಜಂ ವರೂಥಂ ತನ್ವೇ ೩ ಮಮ । ಜ್ಯೋಕ್ಚ ಸೂರ್ಯಂ ದೃಶೇ (ಮುಖಕ್ಕೆ) ॥ ೭ ॥ ಇದಮಾಪಃ ಪ್ರವಹತಯತ್ಕಿಂಚ ದುರಿತಂ ಮಯಿ । ಯದ್ವಾಹಮಭಿದುದ್ರೋಹ ಯದ್ವಾಶೇಪಉತಾನೃತಮ್ (ಕೆಳಸ್ಥಳಕ್ಕೆ) ॥ ೮ ॥ ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ । ಪಯಸ್ವಾನಗ್ನ ಆಗಹಿ ತಂ ಮಾ ಸಂಸೃಜ ವರ್ಚಸಾ (ಸರ್ವಾಂಗಕ್ಕೆ) ॥ ೯ ॥ ಋ ೭-೬-೫.

ಅಘಮರ್ಷಣಮ್

ಋತಂ ಚೇತ್ಯಸ್ಯ ಮಂತ್ರಸ್ಯ । ಮಾಧುಚ್ಛಂದಸೋಽ ಅಘಮರ್ಷಣ ಋಷಿಃ । ಭಾವವೃತ್ತಂ ದೇವತಾ ಅನುಷ್ಟುಪ್ ಛಂದಃ । ಅಘಮರ್ಷಣೇ ವಿನಿಯೋಗಃ ॥ ಗೋಕರ್ಣಾಕೃತಿ ಹಸ್ತದಲ್ಲಿ ನೀರು ಹಿಡಕೊಂಡು ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ ।

ತತೋ ರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ । ಸಮು
ದ್ರಾದರ್ಣವಾದಧಿ ಸಂವತ್ಸರೋ ಅಜಾಯತ । ಅಹೋರಾತ್ರಾಣಿ
ವಿದಧದ್ವಿಶ್ವಸ್ಯ ಮಿಷತೋವಶೀ । ಸೂರ್ಯಾಚಂದ್ರಮಸೌ ಧಾತಾ
ಯಥಾ ಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂ ಚಾಂತರಿ
ಕ್ಷಮಥೋ ಸ್ವಃ ॥ ಋ ೮-೮-೪೮.

ಹೀಗೆ ಅಭಿಮಂತ್ರಿಸಿದ ನೀರನ್ನು, ಮೂಗಿನ ವರೆಗೆ ಎತ್ತಿ, ಬಲ ಮೂಗಿನ ದ್ವಾರಾ ಕಪ್ಪಾದ ಕ್ರೂರರೂಪನಾದ ಪಾಪ ಪುರುಷನನ್ನು ಎಡಹೊಟ್ಟೆಯಿಂದ ಶ್ವಾಸದೊಡನೆ ಹೊರಗೆ ಈ ನೀರಿಗೆ ಹಾಕಿದ್ದಾಗಿ ಭಾವಿಸಿ ಆ ಮೇಲೆ ಅದನ್ನು ನೋಡದೆ, ಎಡ ಪಾರ್ಶ್ವದಲ್ಲಿ ಪ್ರಕಾಶವಾದ ವಜ್ರ ಶಿಲೆಯು ಇರುವುದಾಗಿ ಭಾವಿಸಿ, ನೀರನ್ನು ಅದರ ಮೇಲೆ ರಭಸದಿಂದ ಬಿಸುಟು ಆಚಮನ ಮಾಡಬೇಕು.

ಅರ್ಘ್ಯಕ್ಕೆ ಪ್ರಾಣಾಯಾಮಃ ಸಂಕಲ್ಪಃ

ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ/ಸಾಯಂ ಸಂಧ್ಯಾರ್ಘ್ಯಪ್ರದಾನಂ ಕರಿಷ್ಯೇ ॥

ಪ್ರಾತಃ/ಸಾಯಂ ಪ್ರಾಯಶ್ಚಿತ್ತಾರ್ಘ್ಯಮ್

ಬೆಳಿಗ್ಗೆ ಅರ್ಘ್ಯ ಕೊಡಬೇಕಾದುದು ನಕ್ಷತ್ರಗಳು ಮರೆಯಾಗುವ ಮುಂಚೆ; ಸಂಜೆ ಸೂರ್ಯ ಅಸ್ತವಾಗುವ ಮುಂಚೆ; ಇವು ಮೀರಿದ್ದರೆ ಪ್ರಾಯಶ್ಚಿತ್ತಾರ್ಘ್ಯ ನಂತರ ಕ್ರಮವಾದ ಅರ್ಘ್ಯ ಬೆಳಿಗ್ಗೆ ಪೂರ್ವ; ಸಂಜೆ ಪಶ್ಚಿಮಾಭಿಮುಖವಾಗಿ ನಿಂತು ಕೊಡಬೇಕು. ಕ್ರಮವಾದ ಅರ್ಘ್ಯಕೊಟ್ಟ ಮೇಲೆ ಪ್ರಾಯಶ್ಚಿತ್ತಾರ್ಘ್ಯ ಕೊಡುವುದೂ ವಾಡಿಕೆಯಲ್ಲುಂಟು.

ಪ್ರಾತಃ/ಸಾಯಂ ಸಂಧ್ಯಾಕಾಲಾತೀತ ಪ್ರಾಯಶ್ಚಿತ್ತಾರ್ಘ್ಯಂ ಕರಿಷ್ಯೇ ॥

ಯದದ್ಯೇತ್ಯಸ್ಯ/ಉದ್ಘೇದಭೀತ್ಯಸ್ಯ ಮಂತ್ರಸ್ಯ । ಆಂಗಿರಸಃ ಸುಕಕ್ಷಋಷಿಃ । ಸೂರ್ಯೋ/ಅಗ್ನಿರ್

ದೇವತಾ । ಗಾಯತ್ರೀ ಛಂಧಃ । ಪ್ರಾಯಶ್ಚಿತ್ತಾರ್ಘ್ಯಪ್ರದಾನೇ ವಿನಿಯೋಗಃ ॥ (ಪ್ರಾತಃ) **ಯದದ್ಯಕಚ್ಚವೃತ್ರಹನ್ನುದಗಾ ಅಭಿಸೂರ್ಯ । ಸರ್ವಂತದಿಂದ್ರತೇ ವಶೇ ॥** ಋ ೬-೬-೨೧

(ಸಾಯಂ) **ಉದ್ಘೇದಭಿಶ್ರುತಾಮಘಂ ವೃಷಭಂ ನರ್ಯಾಪಸಂ ಅಸ್ತಾರ ಮೇಷಿಸೂರ್ಯ ॥**

ಅಥವಾ ಎರಡು ಹೊತ್ತೂ ಪ್ರಾಯಶ್ಚಿತ್ತಾರ್ಘ್ಯ : **ಓಂ ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಂ । ಓಂ ತತ್ಸವಿತುರ್ವರೇಣ್ಯಂ । ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್ । ಓಂ ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಂ ॥** ಋುಚೆಯ ಸ್ವರ ಕೆಳಗಿನಂತೆ.

ಅರ್ಘ್ಯಮ್

ಬೆಳಿಗ್ಗೆ ಪೂರ್ವ / ಸಂಜೆ ಪಶ್ಚಿಮ ಮುಖವಾಗಿ ನಿಂತು ಪಾದ ಜೋಡಿಸಿ ಅಂಗೈ ಜೋಡಿಸಿ ಹೆಬ್ಬೆಟ್ಟುಗಳನ್ನು ಪ್ರತ್ಯೇಕಿಸಿ, ನೀರನ್ನು ಬೊಗಸೆಯಲ್ಲಿ ತುಂಬಿಸಿಕೊಂಡು ಸ್ವಲ್ಪಬಗ್ಗಿ ಗಾಯತ್ರೀ ಹೇಳಿ, ಕೈ ಎತ್ತಿ ಅರ್ಘ್ಯ ಬಿಡುವುದು. ಮೂರು ಸಾರಿ.

ಓಂ ಭೂರ್ಭುವಸ್ಸ್ವಃ । ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್ ॥

ಬಲಗೈ ಗೋಕರ್ಣಾಕೃತಿ ಮಾಡಿ ನೀರು ತುಂಬಿಸಿಕೊಂಡು ಬಿಡುತ್ತ ನಿಂತಲ್ಲೆ ಒಮ್ಮೆ ಈ ಮಂತ್ರ ಹೇಳುತ್ತ ಸುತ್ತಬೇಕು.

ಓಂ ಅಸಾವಾದಿತ್ಯೋ ಬ್ರಹ್ಮ ॥

ತರ್ಪಣಮ್

ಒಂದೊಂದು ಮಂತ್ರಕ್ಕೆ ಒಂದೊಂದು ಸಾಟು ನೀರು ಬಲಕೈ ಮೂಲಕ ಬಿಡಬೇಕು.

ಓಂ ಭೂಸ್ತರ್ಪಯಾಮಿ । ಓಂ ಭುವಸ್ತರ್ಪಯಾಮಿ । ಓಂ ಸ್ವಸ್ತರ್ಪಯಾಮಿ । ಓಂ ಭೂರ್ಭುವಸ್ಸ್ವಸ್ತರ್ಪಯಾಮಿ । ಗಾಯತ್ರೀಂ ತರ್ಪಯಾಮಿ । ಸಾವಿತ್ರೀಂ ತರ್ಪಯಾಮಿ ಸರಸ್ವತೀಂ ತರ್ಪಯಾಮಿ । ಓಂ ನಮೋನಾರಾಯಣಾಯ ನಾರಾಯಣಂ ತರ್ಪಯಾಮಿ । ಓಂ ನಮಃ ಶಿವಾಯ ಶಿವಂ ತರ್ಪಯಾಮಿ । (ಆಚಮ್ಯ)

ಜಪಃ

ಗುರುಗಣೇಶಸ್ತುತಿಃ

ಓಂ ಗುರವೇ ನಮಃ ॥ ಗುರುರ್ಬ್ರಹ್ಮಾ ಗುರುರ್ವಿಷ್ಣು ರ್ಗುರುಸ್ಸಾಕ್ಷಾನ್ಮಹೇಶ್ವರಃ । ಗುರುರೇವ ಜಗತ್ಸರ್ವಂ ತಸ್ಮೈ ಶ್ರೀ ಗುರವೇ ನಮಃ ॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ । ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ॥

ಆಸನಶುದ್ಧಿಃ ಭೂತೋಚ್ಚಾಟನಮ್

ಪೃಥಿವ್ಯಾ ಮೇರುಪೃಷ್ಠ ಋಷಿಃ ಸುತಲಂ ಛಂದಃ । ಆದಿ-ಕೂರ್ಮೋ ದೇವತಾ । ಆಸನಶುದ್ಧ್ಯರ್ಥೇ ಜಪೇ ವಿನಿಯೋಗಃ ॥ ಪೃಥ್ವಿತ್ವಯಾ ಧೃತಾ ಲೋಕಾಃ ದೇವಿ ತ್ವಂ ವಿಷ್ಣುನಾ ಧೃತಾ । ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರು ಚಾಸನಂ । ಅಪಸರ್ಪಂತು ತೇ ಭೂತಾಃ ಯೇ ಭೂತಾ ಭುವಿಸಂಸ್ಥಿತಾಃ । ಯೇ ಭೂತಾ ವಿಘ್ನಕರ್ತಾರಸ್ತೇ ನಶ್ಯಂತು ಶಿವಾಜ್ಞಯಾ ॥ ಅಪಕ್ರಾಮಂತು ಭೂತಾದ್ಯಾಃ। ಸರ್ವೇತೇಭೂಮಿ ಭಾರಕಾಃ। ಸರ್ವೇಷಾಮಪ್ಯವಿರೋಧೇನ ಜಪಕರ್ಮಸಮಾರಭೇ । ನಿರಸ್ತಃಪರಾವಸುರಿದಮಹಮರ್ವಾವಸೋಸದನೇಸೀದಾಮಿ.

ಗುರುದೇವನಮಸ್ಕಾರಃ

ಕೈ ಮುಗಿದು ಶಿರಸ್ಸಿನ ಮೇಲೆ ಹಿಡಕೊಳ್ಳುವುದು

ಶ್ರೀ ಗುರುಭ್ಯೋ ನಮಃ । ಪರಮಗುರುಭ್ಯೋ ನಮಃ । ಪರಮೇಷ್ಠಿಗುರುಭ್ಯೋ ನಮಃ । ಗುಂ ಗುರುಭ್ಯೋ ನಮಃ

ಕೈ ಮುಗಿದು ಬಲ ಭುಜದ ಕಡೆಗೆ ತಿರುಗಿಸಿ **ಗಂ ಗಣಪತಯೇ ನಮಃ ।** (ಎಡ ಭುಜ) **ದುಂ ದುರ್ಗಾಯೈ ನಮಃ ।** ಕೈ ಮುಗಿದು ದೇಹದ ಕೆಳ (ಬಲ) ಬದಿಗೆ ತಿರುಗಿಸುವುದು **ಕ್ಷಂ ಕ್ಷೇತ್ರಪಾಲಾಯ ನಮಃ ।** (ಎಡ) **ಸಂ ಸರಸ್ವತ್ಯೈ ನಮಃ ।** (ಹೃದಯ) **ಪಂ ಪರಮಾತ್ಮನೇ ನಮಃ ।**

ಪ್ರಾಣಾಯಾಮಃ ಸಂಕಲ್ಪಃ

ಪ್ರಾಣಾಯಾಮ ಮಾಡಿ **ಶ್ರೀಪರಮೇಶ್ವರ ಪ್ರೀತ್ಯರ್ಥಂ** ಪ್ರಾತಃ / ಸಾಯಂ ಗಾಯ **ತ್ರೀ ಅಷ್ಟಾಕ್ಷರೀ ಪಂಚಾಕ್ಷರೀ ಮಹಾಮಂತ್ರಜಪಂ ಕರಿಷ್ಯೇ ॥** (ಶಿರಸ್ಸನ್ನು ಅಂಗೈಯಿಂದ ಮುಟ್ಟಿಕೊಂಡು) **ಅಸ್ಯ ಶ್ರೀ ಗಾಯತ್ರೀ ಮಹಾ ಮಂತ್ರಸ್ಯ ಗಾಥಿನೋ ವಿಶ್ವಾಮಿತ್ರ ಋಷಿಃ ।** (ಹೃದಯ ಮುಟ್ಟಿ ಕೊಂಡು) **ಸವಿತಾ ದೇವತಾ ।** (ಮುಖವನ್ನು ಮುಟ್ಟಿಕೊಂಡು) ಗಾಯತ್ರೀ **ಛಂದಃ । ಜಪೇ ವಿನಿಯೋಗಃ ।**

ಕರನ್ಯಾಸಃ

ಓಂ ತತ್ಸವಿತುರ್ಬ್ರಹ್ಮಾತ್ಮನೇ ಅಂಗುಷ್ಠಾಭ್ಯಾಂ ನಮಃ ॥ ತರ್ಜನಿಯ ಬೆರಳತುದಿಯಿಂದ ಅಂಗುಷ್ಠದ ಬುಡದಿಂದ ತುದಿಯವರೆಗೆ ಮುಟ್ಟುವುದು.

ಓಂ ವರೇಣ್ಯಂ ವಿಷ್ಣ್ವಾತ್ಮನೇ ತರ್ಜನೀಭ್ಯಾಂ ನಮಃ । ಹೆಬ್ಬೆಟ್ಟಿನ ತುದಿಯಿಂದ ತರ್ಜನಿಬೆರಳ ಬುಡದಿಂದ ತುದಿಯ ವರೆಗೆ ಮುಟ್ಟುವುದು.

ಓಂ ಭರ್ಗೋದೇವಸ್ಯ ರುದ್ರಾತ್ಮನೇ ಮಧ್ಯಮಾಭ್ಯಾಂ ನಮಃ । ಹೆಬ್ಬೆಟ್ಟಿನ ತುದಿಯಿಂದ ಮಧ್ಯಬೆರಳ ಬುಡದಿಂದ ತುದಿಯ ವರೆಗೆ

ಓಂ ಧೀಮಹಿ ಈಶ್ವರಾತ್ಮನೇ ಅನಾಮಿಕಾಭ್ಯಾಂ ನಮಃ । ಅಂತೆಯೇ ಹೆಬ್ಬೆಟ್ಟು ಅನಾಮಿಕ ಬೆರಳು.

ಓಂ ಧಿಯೋ ಯೋನಃ ಸದಾಶಿವಾತ್ಮನೇ ಕನಿಷ್ಠಿಕಾಭ್ಯಾಂ ನಮಃ । ಹೆಬ್ಬೆಟ್ಟು ಕನಿಷ್ಠ ಬೆರಳು.

ಓಂ ಪ್ರಚೋದಯಾತ್ಸರ್ವಾತ್ಮನೇ ಕರತಲಕರಪೃಷ್ಠಾಭ್ಯಾಂ ನಮಃ । ಬಲ ಅಂಗೈಯಿಂದ ಎಡ ಕೈ ಬೆನ್ನನ್ನು, ಎಡ ಅಂಗೈಯಿಂದ ಬಲಕೈ ಬೆನ್ನನ್ನು, ಸವರುವುದು.

ಅಂಗನ್ಯಾಸ :

ಓಂ ತತ್ಸವಿತುರ್ಬ್ರಹ್ಮಾತ್ಮನೇ ಹೃದಯಾಯ ನಮಃ : ಹೆಬ್ಬೆಟ್ಟನ್ನು ಅನಾಮಿಕ ಮತ್ತು ಮಧ್ಯಬೆರಳುಗಳ ನಡುವೆ ತುರುಕಿ ಕೈಮುಷ್ಟಿ ಮಾಡಿಕೊಂಡು ಹೃದಯ ಮುಟ್ಟುವುದು.

ಓಂ ವರೇಣ್ಯಂ ವಿಷ್ಣ್ವಾತ್ಮನೇ ಶಿರಸೇ ಸ್ವಾಹಾ । ತರ್ಜನಿ ಅಂಗುಷ್ಠ ಬೆರಳುಗಳ ತುದಿ ಕೂಡಿಸಿ ಉಳಿದ ಬೆರಳು ಮುಷ್ಟಿಮಾಡಿ ಶಿರಸ್ಸು ಮುಟ್ಟುವುದು.

ಓಂ ಭರ್ಗೋದೇವಸ್ಯ ರುದ್ರಾತ್ಮನೇ ಶಿಖಾಯೈವಷಟ್ । ಬಲಗೈ ಹೆಬ್ಬೆಟ್ಟು ನೆಟ್ಟಗೆ ನಿಲ್ಲಿಸಿ ಕೈ ಮುಷ್ಟಿ ಮಾಡಿ ತಲೆ ಹಿಂದೆ ಜುಟ್ಟಿನಂತೆ ನಿಲ್ಲಿಸುವುದು.

ಓಂ ಧೀಮಹಿ ಈಶ್ವರಾತ್ಮನೇ ಕವಚಾಯ ಹುಂ । ಹೆಬ್ಬೆಟ್ಟು ಮತ್ತು ತರ್ಜನಿ ಬೆರಳುಗಳ ತುದಿ ಮುಟ್ಟಿಸಿ ಉಳಿದಬೆರಳನ್ನು ಮಡಚದೆ ಬಲಗೈಯಿಂದ ಎಡಕುಚದ ತುದಿಯನ್ನು ಮತ್ತು ಎಡಕೈಯಿಂದ ಬಲ ಕುಚದ ತುದಿಯನ್ನು ಮುಟ್ಟುವುದು.

ಓಂ ಧಿಯೋ ಯೋನಃ ಸದಾಶಿವಾತ್ಮನೇ ನೇತ್ರತ್ರಯಾಯ ವೌಷಟ್ । ತರ್ಜನಿ ಬೆರಳಿಂದ ಬಲಗಣ್ಣು ನಡುಬೆರಳಿಂದ ಹುಬ್ಬುಗಳ ಮಧ್ಯ ಮತ್ತು ಅನಾಮಿಕ ಬೆರಳಿನಿಂದ ಎಡಗಣ್ಣು ಮುಟ್ಟುವುದು.

ಓಂ ಪ್ರಚೋದಯಾತ್ಸರ್ವಾತ್ಮನೇ ಅಸ್ತ್ರಾಯಫಟ್ । ಬಲಗೈಯಿಂದ ಬೆನ್ನಮೇಲಿನ ಬತ್ತಳಿಕೆಯಿಂದ ಬಾಣ ತೆಗೆದಂತೆ ಮಾಡಿ, ಎಡಗೈಯಿಂದ ಬಿಲ್ಲಿನ ಹಗ್ಗ ಬಲಗೈಯಿಂದ ಎಳೆದುಬಿಟ್ಟಂತೆ ಮಾಡಿ, ಒಂದು ಚಿಟಿಕಿ ಹೊಡೆದು ಒಮ್ಮೆ ಶಬ್ದವಾಗುವಂತೆ ಕೈ ತಟ್ಟುವುದು.

ಭೂರ್ಭುವಸ್ಸ್ವರೋಂ ಇತಿದಿಗ್ಬಂಧ ಅಥಧ್ಯಾನಂ

ಮಂದಾರಾಹ್ವಯ ರೋಚನಾಂಜನಜಪಾಖ್ಯಾಭೈರ್ಮುಖೈರಿಂದುಮದ್ರತ್ನೋದ್ಯನ್ಮಕುಟಾಂಶುಸಂತತಚತುರ್ವಿಂಶಾರ್ಣಚಿತ್ರಾತನುಃ ॥ ಅಂಭೋಜಾರಿದರಾಹ್ವಯಾ ಗುಣಕಪಾಲಾಖ್ಯಾಚಪಾಶಾಂಕುಶೇಷ್ಟಾಭೀತೀರ್ದಧತೀಭವೇದ್ಭವಭಯ ಪ್ರೋತ್ಸಾರಿಣೀ

ತಾರಿಣೀ ॥ ಗಾಯತ್ರಿಗೆ ಬಿಳಿ ಬಣ್ಣದ್ದು, ಅರಸಿನ ಬಣ್ಣದ್ದು ಕಪ್ಪು ಬಣ್ಣದ್ದು ರಕ್ತ ವರ್ಣದ್ದು ಮತ್ತು ನೀಲಿಬಣ್ಣದ್ದು ಆದ ಐದು ಮುಖಗಳು, ಅನೇಕ ರತ್ನಗಳಿಂದ ಮತ್ತು ಚಂದ್ರಕಲೆಯಿಂದ ಪ್ರಕಾಶಿಸುವ ಕಿರೀಟ ಅದರ ಕಿರಣಗಳಲ್ಲಿ ಶೋಭಿಸುವ ಗಾಯತ್ರೀ ಮಂತ್ರದ ಇಪ್ಪತ್ತನಾಲ್ಕು ಅಕ್ಷರಗಳೇ ದೇಹ. ಮೇಲಿನ ಎರಡು ಕೈಗಳಲ್ಲಿ ಕಮಲಗಳು; ಕೆಳ ಎರಡು ಕೈಗಳಲ್ಲಿ ವರದ, ಅಭಯ ಚಿಹ್ನೆ. ಉಳಿದ ಆರು ಕೈಗಳಲ್ಲಿ ಚಕ್ರ, ಶಂಖ, ಹಗ್ಗ, ಕಪಾಲ, ಪಾಶ ಮತ್ತು ಅಂಕುಶಗಳಿರುವ ಗಾಯತ್ರಿಯು ಸಂಸಾರಭಯವನ್ನು ನೀಗುವವಳಾಗಲಿ.

ಮುದ್ರಾಃ

ಈ 24 ಮುದ್ರೆಗಳನ್ನು ನೋಡಿ ಕಲಿತುಕೊಂಡು ಮಾಡುವುದು.

ಸುಮುಖಂ ಸಂಪುಟಂ ಚೈವ ವಿತತಂ ವಿಸ್ತೃತಂ ತಥಾ । ದ್ವಿಮುಖಂ ತ್ರಿಮುಖಂ ಚೈವ ಚತುಷ್ಕಂ ಪಂಚಕಂ ತಥಾ ॥ ಷಣ್ಮುಖಾಧೋಮುಖಂ ಚೈವ ವ್ಯಾಪಕಾಂಜಲಿಂ ತಥಾ ॥ ಶಕಟಂ ಯಮಪಾಶಂ ಚ ಗ್ರಂಥಿತಂ ಚೋನ್ಮುಖೋನ್ಮುಖಂ ॥ ಪ್ರಲಂಬಂ ಮುಷ್ಟಿಕಂ ಚೈವ ಮತ್ಸ್ಯಂ ಕೂರ್ಮಂ ವರಾಹಕಂ । ಸಿಂಹಾಕ್ರಾಂತಂ ಮಹಾಕ್ರಾಂತಂ ಮುದ್ಗರಂ ಪಲ್ಲವಂ ತಥಾ ॥ ಚತುರ್ವಿಂಶತಿಮುದ್ರಾಶ್ಚ ಗಾಯತ್ರ್ಯಾಃ ಸಂಪ್ರದರ್ಶಯೇತ್ । ಏತಾ ಮುದ್ರಾ ನ ಜಾನಾತಿ ಗಾಯತ್ರೀ ನಿಷ್ಫಲಾ ಭವೇತ್ ॥

ದೇವೀಭಾಗವತ ೧೧-೧೬-೯೯-೧೧೧.

ಆವಾಹನಮ್

ಓಮಿತ್ಯೇಕಾಕ್ಷರಂ ಬ್ರಹ್ಮ-ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಂ-ಗಾಯತ್ರಂ ಛಂದಂ ಪರಮಾತ್ಮಂ ಸರೂಪಂ-ಸಾಯುಜ್ಯಂ ವಿನಿಯೋಗಂ । ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮಸಮ್ಮಿತಂ । ಗಾಯತ್ರೀಂಛಂದಸಾಂಮಾತೇದಂ ಬ್ರಹ್ಮ ಜುಷಸ್ವಮೇ । ಓಜೋಸಿ

ಸಹೋಸಿ ಬಲಮಸಿ ಭ್ರಾಜೋಸಿ ದೇವಾನಾಂ ಧಾಮ ನಾಮಾಸಿ

ವಿಶ್ವಮಸಿ ವಿಶ್ವಾಯುಸ್ಸರ್ವಮಸಿ ಸರ್ವಾಯುರಭಿಭೂರೋಂ ।

** ಅಂಗೈಗಳನ್ನು ಜೋಗಸಮಾಡಿ ಹೊರಗಿಂದ ತನ್ನ ಒಳಗೆ ತರುವಂತೆ ತಿರುಗಿಸುತ್ತ ಮೂರು ಮಂತ್ರದಿಂದ ಮೂರು ಸಾರಿ ಆವಾಹಿಸುವುದು.

ಓಂ ಭೂಃ ಗಾಯತ್ರೀ ಜಪಮಾವಾಹಯಾಮಿ ಓಂ ಭುವಃ ಗಾಯತ್ರೀ ಜಪಮಾವಾಹಯಾಮಿ ಓಂ ಸುವಃ ಗಾಯತ್ರೀ ಜಪಮಾವಾಹಯಾಮಿ ಓಂ ಭೂರ್ಭುವಸುವಃ ಗಾಯತ್ರೀ ಜಪಮಾವಾಹಯಾಮಿ। ಗಾಧಿನೊ ವಿಶ್ವಾಮಿತ್ರ ಋಷಿಃ। ದೇವೀ ಗಾಯತ್ರೀ ಛಂದಃ। ಸವಿತಾ ದೇವತಾ॥ ಗಾಯತ್ರೀ ಮಹಾಮಂತ್ರ ಜಪೇ ವಿನಿಯೋಗಃ ಓಂ ಭೂರ್ಭುವಸ್ಸುವಃ। ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ॥

[ಯಃ] ಯಾವ ಪರಮಾತ್ಮನು [ನಃ) ನಮ್ಮ [ಧಿಯಃ) ಬುದ್ಧಿಗಳನ್ನು [ಪ್ರಚೋದಯಾತ್) ಪ್ರೇರಿಸುವನೋ [ತಸ್ಯ) ಆ ಎಲ್ಲಾ ವೇದಗಳಲ್ಲಿಯೂ ಪ್ರಸಿದ್ಧನಾದ [ಸವಿತುಃ) ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ (ದೇವಸ್ಯ) ಪರಮಾತ್ಮನ (ತತ್) ಅಂಥಾ [ವರೇಣ್ಯಂ] ಶ್ರೇಷ್ಠವಾದ (ಭರ್ಗಃ) ಅಜ್ಞಾನವನ್ನು ಹೋಗಲಾಡಿಸುವ ಸ್ವಯಂ ಪ್ರಕಾಶವಾದ ತೇಜಸ್ಸನ್ನು (ಧೀಮಹಿ) ಧ್ಯಾನಮಾಡುತ್ತೇವೆ.

ಜಪ ಕ್ರಮ

ಬೆಳಗ್ಗೆ ಪೂರ್ವದಿಕ್ಕಿಗೆ ಮುಖಮಾಡಿ ನಿಂತು ಕೈಯನ್ನು ವಸ್ತ್ರದಿಂದ ಮುಚ್ಚಿಕೊಂಡು ೧೦೮ಸಾರಿ ಗಾಯತ್ರೀ ಜಪ ಮಾಡುವುದು ಉತ್ತಮ. (ಆಪತ್ಕಾಲದಲ್ಲಿ ೫೪, ೨೮, ಅಥವಾ ೧೦ ಆದರೂ ಮಾಡಬೇಕು.] ಬೆರಳುಗಳ ಗಂಟುಗಳ ಸಹಾಯದಿಂದ ಮೇರುದಾಟದೆ ಎಣಿಸುವ ಕ್ರಮ ಕಲಿಯುವುದುತ್ತಮ. ದೀರ್ಘ ಜಪ ಮಾಡುವವರು ಪುನಃ ಕರನ್ಯಾಸ ಅಂಗನ್ಯಾಸ ಮಾಡಬೇಕು ಮತ್ತು । ಭೂರ್ಭುವಸ್ಸುವರೋಮಿತಿ ದಿಗ್ವಿಮೋಕಃ ಧ್ಯಾನಂ ॥ ಮಂದಾರಾಹ್ವಯರೋಚನಾಂ.... ತಾರಿಣೀ ॥ [ಪುಟ ೧೧) ಪುನಹ ಹೇಳಬೇಕು.

ಜಪಾಂತ್ಯಮುದ್ರಾಃ

ಈ ಎಂಟು ಮುದ್ರೆಗಳನ್ನು ನೋಡಿ ಕಲಿತುಕೊಂಡು ಮಾತಬೇಕು.

ಸುರಭಿಜ್ಞಾನಚಕ್ರಾಶ್ಚಯೋನಿಃ ಕೂರ್ಮಶ್ಚ ಪಂಕಜಂ ।
ಲಿಂಗಂ ನಿರ್ವಾಣಮುದ್ರಾ ಚ ಜಪಾಂತೇ ಹ್ಯಷ್ಟಮುದ್ರಿಕಾಃ ॥

ಪ್ರಾತಃ ಉಪಸ್ಥಾನಮ್

ಮಿತ್ರಸ್ಯೇತಿ ತ್ರ್ಯರ್ಚಸ್ಯ ಸೂಕ್ತಸ್ಯ । ವಿಶ್ವಾಮಿತ್ರ ಋಷಿಃ । ಆದ್ಯಾಗಾಯತ್ರೀ ದ್ವೇತ್ರಿಷ್ಟುಭೌ ಛಂದಾಂಸಿ । ಮಿತ್ರೋ ದೇವತಾ । ಉಪಸ್ಥಾನೇವಿನಿಯೋಗಃ ।

ಸೂರ್ಯನಿಗೆ ಮುಖಮಾಡಿ ನಿಂತು ಕೈಮುಗಿದುಕೊಂಡು ಪ್ರಾರ್ಥಿಸುವುದು.

ಓಂ ಮಿತ್ರಸ್ಯ ಚರ್ಷಣೀಧೃತೋ ವೋ ದೇವಸ್ಯ ಸಾನಸಿ। ದ್ಯುಮ್ನಂ ಚಿತ್ರಶ್ರವಸ್ತಮಮ್ ॥ (3-4-6) ಮಿತ್ರೋಜನಾನ್ಯಾತಯತಿ ಬ್ರುವಾಣೋ ಮಿತ್ರೋದಾಧಾರ ಪೃಥಿವೀಮುತ ದ್ಯಾಮ್ । ಮಿತ್ರಃ ಕೃಷ್ಟೀರನಿಮಿಷಾಭಿಚಷ್ಟೇ ಮಿತ್ರಾಯ ಹವ್ಯಂ ಘೃತವಜ್ಜುಹೋತ ॥ ಪ್ರ ಸ ಮಿತ್ರಮರ್ತೋ ಅಸ್ತು ಪ್ರಯಸ್ವಾನ್ಯಸ್ತ ಆದಿತ್ಯ ಶಿಕ್ಷತಿ ವ್ರತೇನ । ನ ಹನ್ಯತೇ ನ ಜೀಯತೇ ತ್ವೋತೋ ನೈನಮಂಹೋ ಅಶ್ನೋತ್ಯಂತಿ ತೋ ನ ದೂರಾತ್ ॥

ಸಾಯಂ ಉಪಸ್ಥಾನಮ್

ಪಶ್ಚಿಮಕ್ಕೆ ಮುಖಮಾಡಿ ನಿಂತು :-

ಇಮಂಮೇ ವರುಣತತ್ವಾಯಾಮೀತಿ ಋಚೋರಾಜೀಗರ್ತಿಃ ಶುನಃ ಶೇಫಋಷಿಃ । ವರುಣೋದೇವತಾ । ಆದ್ಯಾಗಾಯತ್ರೀದ್ವಿತೀಯಾತ್ರಿಷ್ಟುಪ್ । ವರುಣೋಪಸ್ಥಾನೇ ವಿನಿಯೋಗಃ ॥

ಓಂ ಇಮಂಮೇ ವರುಣಶ್ರುಧೀಹವ ಮದ್ಯಾಚ ಮೃಳಯ ।

ತ್ವಾಮವಸ್ಯುರಾಚಕೇ ॥ ತತ್ವಾಯಾಮಿ ಬ್ರಹ್ಮಣಾವಂದಮಾನಸ್ತ-
ದಾಶಾಸ್ತೇಯಜಮಾನೋಹವಿರ್ಭಿಃ । ಅಹೇಳಮಾನೋವರುಣೇಹ
ಬೋಧ್ಯುರು ಶಂಸ ಮಾನ ಆಯುಃ ಪ್ರಮೋಷೀಃ ॥ ಋ. ೧-೨-೧೫.

ನಿಂತು ಪ್ರಾತಃ ಪೂರ್ವ (ಇಂದ್ರ) / ಸಾಯಂ ಪಶ್ಚಿಮ [ವರುಣ] ದಿಂದ ಆರಂಭಮಾಡಿ ಅಷ್ಟ ದಿಕ್ಕುಗಳಿಗೆ ಕ್ರಮವಾಗಿ ಪ್ರದಕ್ಷಿಣೆ ಬರುತ್ತ ನಮಸ್ಕರಿಸುವುದು. **ಓಂ ಇಂದ್ರಾಯ ನಮಃ । ಓಂ ಅಗ್ನಯೇ ನಮಃ । ಓಂ ಯಮಾಯ ನಮಃ । ಓಂ ನಿರ್ಋತಯೇ ನಮಃ । ಓಂ ವರುಣಾಯ ನಮಃ । ಓಂ ವಾಯವೇ ನಮಃ । ಓಂ ಕುಬೇರಾಯ ನಮಃ । ಓಂ ಈಶಾನಾಯ ನಮಃ ॥**

ನಿಂತಲ್ಲೇ ನಮಸ್ಕರಿಸುತ್ತ ಹೇಳುವುದು **ಓಂ ನಮೋ ಭೂಮಿ-ಗೋ-ಪಿತೃ-ಮಹಾಪಿತೃ ಗುರುದೇವತಾಭ್ಯೋ ನಮಃ ॥**

ನಮಸ್ಕರಿಸುತ್ತ ನಾಲ್ಕು ಪ್ರದಕ್ಷಿಣೆ ಮಾಡಬೇಕು.

ಓಂ ಭೂರಿದಂ ಪ್ರದಕ್ಷಿಣಂ । ಓಂ ಭುವರಿದಂ ಪ್ರದಕ್ಷಿಣಂ । ಓಂ ಸುವರಿದಂ ಪ್ರದಕ್ಷಿಣಂ । ಓಂ ಭೂರ್ಭುವಸ್ಸುವರಿದಂ ಪ್ರದಕ್ಷಿಣಂ ॥

ಪ್ರಾತಃ ಪೂರ್ವ "ಇಂದ್ರ ಶ್ರೇಷ್ಠಾನಿ" / ಸಾಯಂ ಪಶ್ಚಿಮ "ಧ್ರುವಾಸುತ್ವಾಸು" ಸ್ತುತಿಯಿಂದ ಆರಂಭಿಸಿ ಈ ನಾಲ್ಕು ದಿಕ್ಕು ಸ್ತುತಿಗಳನ್ನು ಹೇಳುವುದು. [ಮೂಡು ದಿಕ್ಕಿಗೆ ಕೈಮುಗಿಯುತ್ತ)

ಓಂ ಇಂದ್ರ ಶ್ರೇಷ್ಠಾನಿ ದ್ರವಿಣಾನಿ ಧೇಹಿ ಚಿತ್ತಿಂ ದಕ್ಷಸ್ಯಸುಭಗತ್ವ-
ಮಸ್ಮೇ । ಪೋಷಂ ರಯೀಣಾಮರಿಷ್ಟಿಂ ತನೂನಾಂ ಸ್ವಾದ್ಮಾನಂ
ವಾಚಃ ಸುದಿನತ್ವಮಹ್ನಾಮ್ ॥ (ಋ. ೨-೬-೨೭)

(ದಕ್ಷಿಣ ದಿಕ್ಕಿಗೆ) **ಯಮಾಯ ಧರ್ಮರಾಜಾಯ ಮೃತ್ಯವೇ**

ಚಾಂತಕಾಯ ಚ । ವೈವಸ್ವತಾಯ ಕಾಲಾಯ ಸರ್ವಭೂತ ಕ್ಷಯಾಯ ಚ ॥ ಔದುಂಬರಾಯ ದಧ್ನಾಯ ನೀಲಾಯ ಪರ ಮೇಷ್ಠಿನೇ । ವೃಕೋದರಾಯ ಚಿತ್ರಾಯ ಚಿತ್ರಗುಪ್ತಾಯ ವೈ ನಮಃ ॥

[ಪಶ್ಚಿಮಕ್ಕೆ] ಓಂ ಧ್ರುವಾಸುತ್ವಾಸು ಕ್ಷಿತಿಷು ಕ್ಷಿಯಂತೋ ವ್ಯಸ್ಮತ್ಪಾಶಂ ವರುಣೋ ಮುಮೋಚತ್ । ಅವೋ ವನ್ವಾನಾ ಅದಿತೇರುಪಸ್ಥಾದ್ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥

ಋ. ೫-೬-೧೦

(ಉತ್ತರ ದಿಕ್ಕಿಗೆ) ಋತಗ್ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ ಪಿಂಗಲಮ್ । ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ । ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥ ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ । ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ।

ಅಭಿವಾದನಮ್

ಬಲಗೈಯಿಂದ ಬಲಕಿವಿಯನ್ನು, ಎಡಗೈಯಿಂದ ಎಡಕಿವಿಯನ್ನು ಮುಟ್ಟಿ ಕೊಂಡು ನಿಂತು ತಮ್ಮ ಗೋತ್ರಪ್ರವರ ಮತ್ತು ಹೆಸರು ಸೇರಿಸಿ ಹೇಳುವುದು.

ಅಭಿವಾದಯೇ ....(ಗೋತ್ರ)................... ಪ್ರವರಾನ್ವಿತ ...ಗೋತ್ರಃ ಆಶ್ವಲಾಯನ ಸೂತ್ರಃ ಋಕ್ಶಾಖಾಧ್ಯಾಯೀ... [ತನ್ನ ಹೆಸರು] ಶರ್ಮಾಽಹಂ ಭೋ ಅಭಿವಾದಯೇ ॥

ಮುಂದೆ ಕುಳಿತು ಗಾಯತ್ರೀ ದೇವಿಯ ಬಲ ಪಾದವನ್ನು ಬಲಗೈಯಿಂದ, ಎಡ ಪಾದವನ್ನು ಎಡಗೈಯಿಂದ ಮುಟ್ಟಿದಂತೆ ಭಾವಿಸಿ ಕೈಮುಗಿಯುವುದು.

ಗಾಯತ್ರೀ ವಿಸರ್ಜನಮ್

ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತಮೂರ್ಧನಿ ॥
ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛದೇವಿ ಯಥಾಸುಖಮ್ ॥

ಅಷ್ಟಾಕ್ಷರೀ ಜಪಃ

ಸಾಧ್ಯೋ ನಾರಾಯಣ ಋಷಿಃ । ಗಾಯತ್ರೀ ಛಂದಃ ।
ಪರಮಾತ್ಮಾ ದೇವತಾ । ಅಷ್ಟಾಕ್ಷರೀ ಜಪೇ ವಿನಿಯೋಗಃ ॥

ನ್ಯಾಸಃ

ಕ್ರುದ್ಧೋಲ್ಕಾಯ ಸ್ವಾಹಾ । ಅಂಗುಷ್ಠಾಭ್ಯಾಂ ನಮಃ ॥ ಮಹೋಲ್ಕಾಯ ಸ್ವಾಹಾ । ತರ್ಜನೀಭ್ಯಾಂ ನಮಃ ॥ ವೀರೋಲ್ಕಾಯ ಸ್ವಾಹಾ । ಮಧ್ಯಮಾಭ್ಯಾಂ ನಮಃ ॥ ದ್ಯುಲ್ಕಾಯ ಸ್ವಾಹಾ । ಅನಾಮಿಕಾಭ್ಯಾಂ ನಮಃ ॥ ಜ್ಞಾನೋಲ್ಕಾಯ ಸ್ವಾಹಾ॥ ಕನಿಷ್ಠಿಕಾಭ್ಯಾಂ ನಮಃ ॥ ಸಹಸ್ರೋಲ್ಕಾಯ ಸ್ವಾಹಾ । ಕರತಲಕರ ಪೃಷ್ಠಾಭ್ಯಾಂ ನಮಃ ॥ [ವೃದ್ಧ ಹಾರೀತ ಸ್ಮೃತಿ ೬-೧೨೧] **ಕ್ರುದ್ಧೋಲ್ಕಾಯ ಸ್ವಾಹಾ । ಹೃದಯಾಯ ನಮಃ ॥ ಮಹೋಲ್ಕಾಯ ಸ್ವಾಹಾ । ಶಿರಸೇ ಸ್ವಾಹಾ ॥ ವೀರೋಲ್ಕಾಯ ಸ್ವಾಹಾ । ಶಿಖಾಯೈ ವಷಟ್ ॥ ದ್ಯುಲ್ಕಾಯ ಸ್ವಾಹಾ । ಕವಚಾಯ ಹುಂ ॥ ಜ್ಞಾನೋಲ್ಕಾಯ ಸ್ವಾಹಾ ನೇತ್ರಾಭ್ಯಾಂವೌಷಟ್ ॥ ಸಹಸ್ರೋಲ್ಕಾಯ ಸ್ವಾಹಾ ಅಸ್ತ್ರಾಯ ಫಟ್ ॥ ಓಂ ಭೂರ್ಭುವಸ್ಸುವರೋಂ ॥**

ಇತಿದಿಗ್ಬಂದ ಅಥಃದ್ಯಾನಂ

ಅರ್ಕಾಘಾಭಂ ಕಿರೀಟಾನ್ವಿತ ಮಕರಲಸತ್ಕುಂಡಲಂ ದೀಪ್ತಿ ರಾಜತ್ ಕೇಯೂರಂ ಕೌಸ್ತುಭಾಭಾಂ ಶಬಲರುಚಿರಹಾರಂ ಸಪೀ-

ತಾಂಬರಂ ಚ । ನಾನಾರತ್ನಾಂಶುಭಿನ್ನಾಭರಣಶತಯುತಂ ಶ್ರೀಧರಾಶ್ಲಿಷ್ಟಪಾರ್ಶ್ವಂ ವಂದೇ ದೋಸ್ಸಕ್ತಚಕ್ರಾಂಬುರುಹದರ ಗದಂ ವಿಶ್ವವಂದ್ಯಂ ಮುಕುಂದಂ ॥ (ಪ್ರಪಂಚಸಾರ ೨೦-೭)

ಸೂರ್ಯರ ಸಮೂಹದಂತೆ ಪ್ರಕಾಶವುಳ್ಳ, ಕಿರೀಟಯುಕ್ತವಾದ ಮಿಂಚುತ್ತಿರುವ ಕುಂಡಲಗಳುಳ್ಳ, ಪ್ರಭೆಯಿಂದ ಶೋಭಿಸುವ ಕೇಯೂರಗಳುಳ್ಳ, ಕೌಸ್ತುಭ ಮಣಿಯಿಂದ ಶೋಭಿಸುವ, ನಾನಾ ಕಾಂತಿಯುಕ್ತ ಸುಂದರ ಹಾರಗಳುಳ್ಳ, ಪೀತಾಂಬರ ಧಾರಿಯಾದ, ಅನೇಕ ರತ್ನಗಳ ಕಾಂತಿಯಿಂದ ವಿಭಾಗಿಸಲ್ಪಟ್ಟ, ನೂರಾರು ಆಭರಣಗಳುಳ್ಳ, ಲಕ್ಷ್ಮೀ ಮತ್ತು ಭೂದೇವಿಯುವರಿಂದ ಆಲಿಂಗಿಸಲ್ಪಟ್ಟ ಎರಡು ಪಾರ್ಶ್ವಗಳುಳ್ಳ, ಚಕ್ರ, ಪದ್ಮ ಶಂಖ ಮತ್ತು ಗದೆಗಳನ್ನು ಧರಿಸಿರುವ, ಎಲ್ಲರಿಂದ ಪೂಜಿಸಲ್ಪಡುವ, ಮುಕ್ತಿದಾಯಕನಾದ ನಾರಾಯಣನನ್ನು ವಂದಿಸುತ್ತೇನೆ.

ಆವಾಹನಮ್

ಓಂ ಭೂಃ ಅಷ್ಟಾಕ್ಷರೀಮಾವಾಹಯಾಮಿ । ಓಂ ಭುವಃ ಅಷ್ಟಾಕ್ಷರೀಮಾವಾಹಯಾಮಿ । ಓಂ ಸ್ವಃ ಅಷ್ಟಾಕ್ಷರೀಮಾವಾಹಯಾಮಿ । ಓಂ ಭೂರ್ಭುವಸ್ಸ್ವಃ ಅಷ್ಟಾಕ್ಷರೀಮಾವಾಹಯಾಮಿ ॥

॥ ಓಂ ನಮೋ ನಾರಾಯಣಾಯ ॥

❁ ಚುಟುಕಾಗಬೇಕೆಂದಿರುವವರು : ॥ ಓಂ ಅಷ್ಟಾಕ್ಷರೀ ಮಾವಾಹಯಾಮಿ ॥ ॥ ಓಂ ನಮೋ ನಾರಾಯಣಾಯ ॥

೧೦೮ ಅಥವಾ ೫೪ ಇಲ್ಲವೇ ೨೮ ಆವರ್ತಿಯಾದರೂ ಜಪಿಸಬೇಕು.

ಹಿಂದೆ ದಿಗ್ಬಂಧ ಮಾಡಿಕೊಂಡವರು ಪುನಃ ಕರನ್ಯಾಸ, ಅಂಗನ್ಯಾಸ ಮಾಡಬೇಕು. ಮತ್ತು ಭೂರ್ಭುವಸು ವರೋಮಿತಿ ದಿಗ್ವಿಮೋಕಃ ಧ್ಯಾನಂ ॥ ಅರ್ಕೌಘಾಭಂ........ ವಿಶ್ವವಂದ್ಯಂ ಮುಕುಂದಂ । ಪುನಃ ಹೇಳುವುದು.

ಪಂಚಾಕ್ಷರೀ ಜಪಃ

ವಾಮದೇವ ಋಷಿಃ । ಪಂಕ್ತಿಛಂದಃ । ಶ್ರೀ ಸಾಂಬಸದಾಶಿವ–ರುದ್ರೋ ದೇವತಾ । ಶ್ರೀಪಂಚಾಕ್ಷರೀ ಜಪೇ ವಿನಿಯೋಗಃ ॥

ನ್ಯಾಸಃ

ಓಂ ಅಂಗುಷ್ಠಾಭ್ಯಾಂ ನಮಃ । ನಂ ತರ್ಜನೀಭ್ಯಾಂ ನಮಃ । ಮಂ ಮಧ್ಯಮಾಭ್ಯಾಂ ನಮಃ । ಶಿಂ ಅನಾಮಿಕಾಭ್ಯಾಂ ನಮಃ ವಾಂ ಕನಿಷ್ಠಿಕಾಭ್ಯಾಂ ನಮಃ । ಯಂ ಕರತಲಕರಪೃಷ್ಠಾಭ್ಯಾಂ ನಮಃ ॥

ಓಂ ಹೃದಯಾಯ ನಮಃ । ನಂ ಶಿರಸೇ ಸ್ವಾಹಾ । ಮಂ ಶಿಖಾಯೈವಷಟ್ । ಶಿಂ ಕವಚಾಯ ಹುಂ।ವಾಂ ನೇತ್ರತ್ರಯಾಯ ವೌಷಟ್ । ಯಂ ಅಸ್ತ್ರಾಯಫಟ್ । ಭೂರ್ಭುವಸ್ಸುವರೋಂ

ಇತಿದಿಗ್ಬಂಧಃ ಅಥಧ್ಯಾನಮ್

ಬಿಭ್ರದ್ದೋರ್ಭಿಃ ಕುಠಾರಂ ಮೃಗಮಭಯವರೌ ಸುಪ್ರಸನ್ನೋ ಮಹೇಶಃ ಸರ್ವಾಲಂಕಾರದೀಪ್ತಃ ಸರಸಿಜನಿಲಯೋ ವ್ಯಾಘ್ರಚರ್ಮಾತ್ತವಾಸಾಃ । ಧ್ಯೇಯೋ ಮುಕ್ತಾಪರಾಗಾಮೃತ ರಸಕಲಿತಾದ್ರಿಪ್ರಭಃ ಪಂಚವಕ್ತ್ರ ಸ್ತ್ರ್ಯಕ್ಷಃ ಕೋಟೀರಕೋಟಿ ಘಟಿತತುಹಿನರೋಚಿಷ್ಕಳೋತ್ತುಂಗಮೌಲಿಃ । ಪ್ರಪಂಚಸಾರ

೧೭-೪೧) ಕುಠಾರ, ಮೃಗ, ಅಭಯ ಮತ್ತು ವರಗಳನ್ನು ಕರಗಳಲ್ಲಿ ಧರಿಸಿರುವ ಅತ್ಯಂತ ಪ್ರಸನ್ನನಾದ, ಎಲ್ಲ ಅಲಂಕಾರಗಳಿಂದ ಶೋಭಿಸುವ, ಕಮಲನಿಲಯ ನಾದ, ವ್ಯಾಘ್ರಚರ್ಮವೇ ವಸ್ತ್ರವಾಗಿರುವ, ಸುಧಾರಸದಲ್ಲಿ ಕಲಸಿದ ಮುಕ್ತಾ ಚೂರ್ಣಗಳ ಪರ್ವತದಂತೆ ಕಾಂತಿಯುಳ್ಳ, ಪಂಚಮುಖನಾದ, ತ್ರಿನೇತ್ರನಾದ, ಎತ್ತರವಾದ ಧನುರಗ್ರಭಾಗದಂತಿರುವ ಚಂದ್ರನ ಕಲೆಯಿಂದ ಕೂಡಿದ ಶೇಖರ ವುಳ್ಳ ಪರಮೇಶ್ವರನು ಧ್ಯಾನಿಸಲ್ಪಡಬೇಕು.

ಆವಾಹನಮ್

ಓಂ ಭೂಃ ಪಂಚಾಕ್ಷರೀಮಾವಾಹಯಾಮಿ । ಓಂ ಭುವಃ ಪಂಚಾಕ್ಷರೀಮಾವಾಹಯಾಮಿ । ಓಂ ಸ್ವಃ ಪಂಚಾಕ್ಷರೀಮಾ ವಾಹಯಾಮಿ । ಓಂ ಭೂರ್ಭುವಸ್ಸ್ವಃ ಪಂಚಾಕ್ಷರೀಮಾವಾಹ ಯಾಮಿ ॥ ಓಂ ನಮಃ ಶಿವಾಯ ॥

❀ ಚುಟುಕಾಗಲಿಕ್ಕೆ ಓಂ ಪಂಚಾಕ್ಷರೀಮಾವಾಹಯಾಮಿ ॥ ಓಂ ನಮಃ ಶಿವಾಯ ॥ ೧೦೮ ಅಥವಾ ೫೪ ಅಥವಾ ೨೮ ಸಾರಿ ಜಪಿಸುವುದು.

ಹಿಂದೆ ದಿಗ್ಬಂಧ ಮಾಡಿಕೊಂಡವರು ಪುನಃ ಕರನ್ಯಾಸ, ಅಂಗನ್ಯಾಸ ಮಾಡಬೇಕು. ಮತ್ತು ಭೂರ್ಭುವಸ್ಸುವರೋಮಿತಿ ದಿಗ್ವಿಮೋಕಃ ಧ್ಯಾನಂ ॥ ಬಿಭ್ರದ್ದೋರ್ಭಿಃ... ತ್ತುಂಗಮೌಲಿಃ ॥ ಪುನಃ ಹೇಳಬೇಕು.

❀ ಈಶ್ವರಾರ್ಪಣಂ

ಅನೇನ ಪ್ರಾತಃ/ಸಾಯಂ ಸಂಧ್ಯಾವಂದನ ಗಾಯತ್ರೀ, ಅಷ್ಟಾಕ್ಷರೀ, ಪಂಚಾಕ್ಷರೀ ಮಹಾಮಂತ್ರ ಜಪಕರ್ಮಣಾ ಭಗವಾನ್ ಸರ್ವಾತ್ಮಕಃ ಶ್ರೀ ಪರಮೇಶ್ವರಃ ಪ್ರೀಯತಾಂ ॥ ಜಪಕಾಲೇ ಮಧ್ಯೇಮಂತ್ರಲೋಪ ತಂತ್ರಲೋಪ ಭಕ್ತಿಲೋಪ ಶ್ರದ್ಧಾಲೋಪಸರ್ವಲೋಪದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯಜಪಂ ಕರಿಷ್ಯೇ ॥

ಓಂ ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥ ಹರಾಯ ನಮಃ ಮೃಡಾಯ ನಮಃ । ಶಂಕರಾಯ ನಮಃ॥

ಇದನ್ನು ಮೂರು ಸಾರಿ ಉಚ್ಚರಿಸಬೇಕು. ಆಚಮನ

❀ ಭೋಜನ ವಿಧಿಃ

ಅನ್ನಕ್ಕೆ ನಮಸ್ಕಾರ ಮಾಡುವುದು. ಬಲ ಅಂಗೈಗೆ ನೀರು ಹಾಕಿಕೊಂಡು ಒಮ್ಮೆ ಗಾಯತ್ರೀ ಹೇಳುತ್ತ ಅನ್ನವನ್ನು ಪ್ರೋಕ್ಷಣೆ ಮಾಡುವುದು.

(ಹಗಲು) **ಸತ್ಯಂ ತ್ವರ್ತೇನ ಪರಿಷಿಂಚಾಮಿ** [ರಾತ್ರಿ] **ಋತಂ ತ್ವಾ ಸತ್ಯೇನ ಪರಿಷಿಂಚಾಮಿ** ಹೇಳುತ್ತ ಭೋಜನ ಪಾತ್ರೆಯ ಸುತ್ತು ಪ್ರದಕ್ಷಿಣವಾಗಿ ನೀರು ಬಿಡುತ್ತ ಸುತ್ತು ಕಟ್ಟುವುದು.

ಬ್ರಹ್ಮಚಾರಿಗಳಲ್ಲದವರು ಚಿತ್ರಾಹುತಿ ಹಾಕುವುದು:- ಭೋಜನ ಪಾತ್ರೆಯ ಬಲ ಭಾಗದಲ್ಲಿ ನೆಲದಲ್ಲಿ ನೀರಿನ ಗೀಟು ಎಳೆದು ಕೆಳಗಿನ ಮಂತ್ರ ಹೇಳುತ್ತ ಐದು ರಾಶಿ ಸ್ವಲ್ಪ ಸ್ವಲ್ಪ ಅನ್ನ ಹಾಕುತ್ತ ಬರುವುದು. ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತಾಗ ಮುಂದೆ ಮುಂದೆ ಹಾಕುತ್ತ ಹೋಗುವುದು. ಉಳಿದ ದಿಕ್ಕಿಗೆ ಮುಖವಾಗಿ ಕುಳಿತಾಗ ಹತ್ತಿರ ಹತ್ತಿರವಾಗಿ ಹಾಕುತ್ತ ಬರುವುದು

ಓಂ ಚಿತ್ರಾಯ ಸ್ವಾಹಾ । ಓಂ ಚಿತ್ರಗುಪ್ತಾಯ ಸ್ವಾಹಾ । ಓಂ ಯಮಾಯ ಸ್ವಾಹಾ । ಓಂ ಯಮಧರ್ಮಾಯ ಸ್ವಾಹಾ । ಓಂ ಸರ್ವೇಭ್ಯೋಭೂತೇಭ್ಯಃ ಸ್ವಾಹಾ ।

ಈ ಆಹುತಿಗಳನ್ನು ಕೂಡಿಸಿ ರಾಶಿ ಮಾಡಿ ಅದರ ಮೇಲೆ ನೀರು ಬಿಡುವುದು. ಭೋಜನ ಪಾತ್ರವನ್ನು ಎಡಗೈಯ್ಯ ನಡುಬೆರಳಿಂದ ಮುಟ್ಟಿಕೊಳ್ಳುವುದು.

ಅಂತಶ್ಚರತಿ ಭೂತೇಷು ಗುಹಾಯಾಂ ಸರ್ವತೋಮುಖಃ ।
ತ್ವಂ ಯಜ್ಞಃ ತ್ವಂ ವಷಟ್ಕಾರಃ ತ್ವಂ ವಿಷ್ಣುಃ ಪುರುಷಃ ಪರಃ ॥

ಬಲಗೈಯಲ್ಲಿ ಸ್ವಲ್ಪ ನೀರನ್ನು ಹಾಕಿಕೊಳ್ಳುವುದು.

ಅಮೃತೋಪಸ್ತರಣಮಸಿ । ಜುಹೋಮಿ ಸ್ವಾಹಾ ॥ ಎಂದು ಕುಡಿಯುವುದು. (ಆಪೋಶನ)

ಆ ಮೇಲೆ ಏಳು ಸಾರಿ ಮಂತ್ರ ಹೇಳುತ್ತ, ಸ್ವಲ್ಪ ಸ್ವಲ್ಪ ಅನ್ನವನ್ನು ಕೆಳಗೆ ಹೇಳಿದಂತೆ ಅಥವಾ ಎಲ್ಲಾ ಬೆರಳುಗಳಿಂದಾದರೂ ಭುಜಿಸುವುದು.

ಓಂ ಪ್ರಾಣಾಯ ಸ್ವಾಹಾ [ಹೆಬ್ಬೆಟ್ಟು ಮತ್ತು ಕನಿಷ್ಠ ಬೆರಳುಗಳಿಂದ ಅನ್ನ ಹೆಕ್ಕುವುದು.] । **ಓಂ ಅಪಾನಾಯ ಸ್ವಾಹಾ** [ಹೆಬ್ಬೆಟ್ಟು ಅನಾಮಿಕ] । **ಓಂ ವ್ಯಾನಾಯ ಸ್ವಾಹಾ** (ಹೆಬ್ಬೆಟ್ಟು ಮಧ್ಯಮ] । **ಓಂ ಉದಾನಾಯ ಸ್ವಾಹಾ** [ಹೆಬ್ಬೆಟ್ಟು ಮತ್ತು ತರ್ಜನಿ) **ಓಂ ಸಮಾನಾಯ ಸ್ವಾಹಾ** [ಎಲ್ಲಾ ಬೆರಳುಗಳಿಂದ) **ಓಂ ಆತ್ಮನೇ ಸ್ವಾಹಾ । ಓಂ ಪರಮಾತ್ಮನೇ ಸ್ವಾಹಾ** ॥

ಊಟವಾದ ಮೇಲೆ ಬಲಗೈಯಲ್ಲಿ ಸ್ವಲ್ಪ ನೀರು ಹಾಕಿಕೊಂಡು **ಅಮೃತಾಪಿಧಾನಮಸಿ ಜುಹೋಮಿ ಸ್ವಾಹಾ** । ಎಂದು ಕುಡಿಯುವುದು. (ಅಪೋಶನ] ಬಾಯಿ ಕೈ ಕಾಲು ತೊಳೆದು ಎರಡು ಬಾರಿ ಆಚಮನ ಮಾಡುವುದು.

ಯಜ್ಞೋಪವೀತಧಾರಣ ಮಂತ್ರಃ

ಅಂದೇ ಹೊಸತಾಗಿ ಗಂಟು ಹಾಕಿದ ಯಜ್ಞೋಪವೀತ ತಯಾರುಮಾಡಿಕೊಳ್ಳಬೇಕು. ಸ್ನಾನಮಾಡಿರಬೇಕು.

ಆಚಮ್ಯ, ಪ್ರಾಣಾನಾಯಮ್ಯ, ಮನೋಪಾತ್ತ ಸಮಸ್ತ ದುರಿತ ಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಶ್ರೌತಸ್ಮಾರ್ತ ನಿತ್ಯಕರ್ಮಾನುಷ್ಠಾನಯೋಗ್ಯತಾ ಸಿದ್ಧ್ಯರ್ಥಂ ಉಪವೀತಧಾರಣಂ ಕರಿಷ್ಯೇ ॥ [ನೀರು ಬಿಡುವುದು] ಯಜ್ಞೋಪವೀತವನ್ನು ತೊಳೆದುಕೊಂಡು:-

ಧಾರಣಯೋಗ್ಯತಾಸಿದ್ಧ್ಯರ್ಥಂ ದಶವಾರಂ ಗಾಯತ್ರ್ಯಭಿಮಂತ್ರಣಂ ಕರಿಷ್ಯೇ ॥ ಯಜ್ಞೋಪವೀತಮಿತ್ಯಸ್ಯ ಮಂತ್ರಸ್ಯ ಪರಬ್ರಹ್ಮ ಋಷಿಃ । ಪರಮಾತ್ಮಾ ದೇವತಾ । ತ್ರಿಷ್ಟುಪ್ ಛಂಧಃ ॥ ಮಮಶ್ರೌತಸ್ಮಾರ್ತಕರ್ಮಾನುಷ್ಠಾನಸಿದ್ಧ್ಯರ್ಥಂ ಯಜ್ಞೋಪವೀತ ಧಾರಣೇ ವಿನಿಯೋಗಃ ॥ ಎಂದು ಒಂದು ಯಜ್ಞೋಪವೀತಕ್ಕೆ೧೦ ಗಾಯತ್ರೀ ಜಪಮಾಡಿ, ಉಪವೀತವನ್ನು ಒಂದೊಂದಾಗಿ ಎರಡು ಕೈಗಳ ನಡುವೆ, ಅಂಗುಷ್ಠ ಬಿಟ್ಟು ಉಳಿದ ಬೆರಳುಗಳ ಹಿಂದೆ ಬರುವಂತೆ ಎತ್ತಿ ಹಿಡಕೊಂಡು ಕೆಳಗಿನ ಮಂತ್ರವನ್ನು ಮೂರು ಸಾರಿ ಉಚ್ಚರಿಸಬೇಕು.

ಓಂ ಯಜ್ಞೋಪವೀತಂ ಪರಮಂ ಪವಿತ್ರ ಪ್ರಜಾಪತೇ-ರ್ಯತ್ ಸಹಜಂ ಪುರಸ್ತಾತ್ ॥ ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ (ಬ್ರಹ್ಮೋಪನಿಷತ್)

ಆ ಮೇಲೆ ಹಾಗೆಯೇ ಎಡಗೈ ತಲೆಗೂ ಏರಾಗಿ ಹಿಡಿದು ಆ ಜನಿವಾರ ಹಾಕಿಕೊಳ್ಳುವುದು. ಒಂದು ಜನಿವಾರ ಹಾಕಿಕೊಂಡು ಒಂದಾವರ್ತಿ ಆಚಮನ ಮಾಡುವುದು. ಹಾಗೆಯೇ ಇತರ ಜನಿವಾರಗಳನ್ನು ಮಂತ್ರ ಹೇಳಿ ಹಾಕಿಕೊಳ್ಳುವುದು. ಗೃಹಸ್ಥರು ಎರಡು ಜನಿವಾರ ಹಾಕಿಕೊಳ್ಳಬೇಕು. ಉತ್ತರೀಯಾರ್ಥವಾಗಿ ಮೂರನೆಯದನ್ನೂ, ವಸ್ತ್ರಾಭಾವಕ್ಕಾಗಿ ನಾಲ್ಕನೆಯದನ್ನೂ ಧರಿಸಬಹುದು. ಅಶುದ್ಧವಾದ ಅಥವಾ ಭಿನ್ನತಂತುವಾದ (ತುಂಡಾದ) ಜನಿವಾರ ಸೊಂಟದ ಕೆಳಗಿಂದ ಜಾರಿಸಿ ತೆಗೆಯುತ್ತ ಹೇಳುವುದು.

ಉಪವೀತಂ ಅಶುದ್ಧಂ ಚ [ಅಥವಾ ಭಿನ್ನತಂತುಂ] **ಜೀರ್ಣಂ ಕಶ್ಮಲದೂಷಿತಂ । ವಿಸೃಜಾಮಿ ಯಶೋ ಬ್ರಹ್ಮವರ್ಚೋ ದೀರ್ಘಾಯುರಸ್ತು ಮೇ ॥** ತೆಗೆದ ಜನಿವಾರವನ್ನು **ಸಮುದ್ರಂ ಗಚ್ಛ ಸ್ವಾಹಾ** ಎಂದು ಸಮುದ್ರ ನದಿ, ಕೆರೆ ಅಥವಾ ಬಾವಿಗೆ ಬಿಸಾಡುವುದು.

ಅನೇನ ಉಪವೀತಧಾರಣಕರ್ಮಣಾ ಶ್ರೀ ಪರಮೇಶ್ವರಃ ಪ್ರೀಯತಾಂ । ಎಂದು ನೀರು ಬಿಡುವುದು.

ಅಗ್ನಿ ಕಾರ್ಯಮ್

ಅಗ್ನಿಯ ಮುಂದೆ ಪೂರ್ವ ಮುಖಮಾಡಿ ಕುಳಿತು ಆಚಮನ ಪ್ರಾಣಾಯಾಮ ಮಾಡಿ ಸಂಕಲ್ಪವಾಗಿ ಹೇಳುವುದು.

ಮಮೋಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ/ಸಾಯಂ **ಅಗ್ನಿಕಾರ್ಯಾಖ್ಯಂ ಕರ್ಮ ಕರಿಷ್ಯೇ ॥** ನೀರು ಬಿಡುವುದು.

ಅಕ್ಷತೆ ಕಾಳು ಹಿಡಿದುಕೊಂಡು ನಿಂತು ಮುಂದಿನ ಮಂತ್ರ ಹೇಳಿ ಅಗ್ನಿಗೆ ಹಾಕುವುದು. **ಅಗ್ನಿಂ ಪ್ರಜ್ವಲಿತಂ ವಂದೇ ಜಾತವೇದಂ ಹುತಾಶನಂ । ಸುವರ್ಣವರ್ಣಮನಲಂ ಸಮಿದ್ಧಂ ವಿಶ್ವತೋಮುಖಂ । ಶ್ರೀ ಯಜ್ಞೇಶ್ವರಾಯ ನಮಃ ।** ಕುಳಿತುಕೊಂಡು ಬಲಗೈಯಲ್ಲಿ ನೀರು ಹಾಕಿ

ಕೊಂಡು ಸುರಿಸುತ್ತ ಮುಂದೆ ಹೇಳಿದಂತೆ ಈಶಾನ್ಯದಿಂದ ಆರಂಭಿಸಿ ಅಗ್ನಿಯ ಸುತ್ತಲೂ ನೀರು ಹಾಕುವುದು.

ಅದಿತೇಽನುಮನ್ಯಸ್ವ ಅಗ್ನಿಯ ಪೂರ್ವಕ್ಕೆ ಎಡದಿಂದ ಬಲಕ್ಕೆ ॥

ಅನುಮತೇಽನುಮನ್ಯಸ್ವ ದಕ್ಷಿಣಕ್ಕೆ ಹತ್ತಿರದಿಂದ ಪೂರ್ವಕ್ಕೆ ॥

ಸರಸ್ವತೇಽನುಮನ್ಯಸ್ವ ಪಶ್ಚಿಮದಲ್ಲಿ ಬಲದಿಂದ ಎಡಕ್ಕೆ ॥

ದೇವ ಸವಿತಃ ಪ್ರಸುವ ಉತ್ತರದಲ್ಲಿ ಹತ್ತಿರದಿಂದ ದೂರಕ್ಕೆ ।

ಸಮಿತ್ತನ್ನು ಹಿಡಕೊಂಡು ಮುಂದಿನ ಮಂತ್ರ ಹೇಳಿ ಅಗ್ನಿಗೆ ಹಾಕುವುದು.

ಅಗ್ನಯೇ ಸಮಿಧಮಿತ್ಯಸ್ಯ ಮಂತ್ರಸ್ಯ । ಹಿರಣ್ಯಗರ್ಭ ಋಷಿಃ । ಅಗ್ನಿರ್ದೇವತಾ । ಬೃಹತೀ ಛಂದಃ । ಸಮಿಧಾಧಾನೇ ವಿನಿಯೋಗಃ ।

ಓಂ ಅಗ್ನಯೇ ಸಮಿಧಮಾಹಾರ್ಷಂ ಬೃಹತೇ ಜಾತವೇದಸೇ ॥

ತಯಾತ್ವಮಗ್ನೇ ವರ್ಧಸ್ವ ಸಮಿಧಾ ಬ್ರಹ್ಮಣಾ ವಯಂ ಸ್ವಾಹಾ ॥

ಅಗ್ನಯ ಇದಂ ನ ಮಮ ॥

ಬಲ ಅಂಗೈಯನ್ನು ತೊಳಕೊಂಡು **ತೇಜಸಾಮಾಸಮನಜ್ಮಿ** ಎಂದು ಹೇಳಿ ಬಲ ಹಸ್ತವನ್ನು ಅಗ್ನಿಯಲ್ಲಿ ಕಾಯಿಸಿ ಕಣ್ಣುಗಳನ್ನು ಮುಟ್ಟಿಕೊಳ್ಳುವುದು. ಪುನಃ ಕೈ ತೊಳಕೊಂಡು ಎರಡು ಸಾರಿ ಮಾಡಿ ಅಕ್ಷತೆ ಹಿಡಕೊಂಡು ನಿಂತು ಹೇಳುವುದು.

ಮಯಿಮೇಧಾಮಿತಿ ಷಣ್ಣಾಂ ಹಿರಣ್ಯಗರ್ಭ ಋಷಿಃ । ಪೂರ್ವೇಷಾಂ ತ್ರಯಾಣಾಂ ಅಗ್ನೀಂದ್ರಸೂರ್ಯಾ ದೇವತಾ । ಉತ್ತರೇಷಾಂ ತ್ರಯಾಣಾಂ ಅಗ್ನಿ ರ್ದೇವತಾ । **ಗಾಯತ್ರೀ ಛಂದಃ ಅಗ್ನ್ಯುಪಸ್ಥಾನೇ ವಿನಿಯೋಗಃ** ॥

ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋ ದಧಾತು ।

ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ।

ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ

ಭ್ರಾಜೋ ದಧಾತು । ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂ । ಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ । ಯತ್ತೇ ಅಗ್ನೇ ಹರಸ್ತೇನಾಹಂ ಹರಸ್ವೀ ಭೂಯಾಸಂ ॥ ಓಂ ಚಮೇ ಹಿರಣ್ಯಗರ್ಭಸ್ಸಾರಸ್ವತೋಗ್ನಿಸ್ತ್ರಿಷ್ಟುಪ್ । ಅಗ್ನ್ಯುಪಸ್ಥಾನೇ ವಿನಿಯೋಗಃ ॥ ಓಂ ಚಮೇಸ್ವರಶ್ಚಮೇ ಯಜ್ಞೋಪಚತೇ ನಮಶ್ಚ । ಯತ್ತೇನ್ಯೂನಂ ತಸ್ಮೈತಉಪಯತ್ತೇತಿ ರಿಕ್ತಂ ತಸ್ಮೈ ತೇ ನಮಃ ॥ ಅಗ್ನಯೇ ನಮಃ ॥ ಸ್ವಸ್ತಿ ॥ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ॥ ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ ॥ ಅಭಿವಾದಯೇ

ಹುತಭಸ್ಮವನ್ನು ಸಂಧ್ಯೋಪಾಸನೆಯಂತೆ ಮಂತ್ರ ಹೇಳಿ ಹಚ್ಚಿಕೊಳ್ಳುವುದು.

ಅನೇನ ಪ್ರಾತಃ/ಸಾಯಂ ಅಗ್ನಿ ಕಾರ್ಯಕರ್ಮಣಾ ಭಗವಾನ್ಸರ್ವಾತ್ಮಕಃ ಶ್ರೀ ಪರಮೇಶ್ವರಃ ಪ್ರೀಯತಾಂ ॥ ನೀರು ಬಿಡುವುದು.

❀ ವಿಶೇಷ ಸೂಚನೆ

ಸಂಧ್ಯೋಪಾಸನೆ ಕಲಿಯಲಿಕ್ಕೆ ಈ ಪುಸ್ತಕ ಮಾತ್ರ ಸಾಲದು. ಅದರ ಸುಸ್ವರವಿರುವ ವೇದಮಂತ್ರಗಳನ್ನು ಸರಿಯಾದ ಉಚ್ಚಾರ ಬರುವಂತೆ ಕಲಿಯಲಿಕ್ಕೆ ಪುರೋಹಿತರಿಂದ ಕೆಲವು ಸಾರಿಯಾದರೂ ಹೇಳಿಸಿಕೊಳ್ಳಬೇಕು. ಆಚಮನ, ಪ್ರಾಣಾಯಾಮ, ನ್ಯಾಸ, ಮುದ್ರೆಗಳು, ಅಗ್ನಿಕಾರ್ಯ ಎಲ್ಲಾ ಅವರಿಂದಲೇ ಚೆನ್ನಾಗಿ ಕಲಿಯಲು ಸಾಧ್ಯ. ಚುಟುಕಾದ ಸಂಧ್ಯೋಪಾಸನೆ ಬೇಕೆನ್ನುವವರು ❀ ಗುರುತಿದ್ದ ಭಾಗಗಳೊಡನೆ ಮಾತ್ರ ಆರಂಭಿಸಿ, ಶ್ರದ್ಧೆ ಹೆಚ್ಚಾದ ಮೇಲೆ ಹೆಚ್ಚು ಗಾಯತ್ರೀ ಜಪವನ್ನೂ ಅದಕ್ಕೆ ತಕ್ಕಂತೆ ಉಳಿದ ಮಂತ್ರಗಳನ್ನೂ ಸೇರಿಸಿಕೊಳ್ಳಬಹುದು.

ಬ್ರಾಹ್ಮಣರಿಗೆ ಎಚ್ಚರಿಕೆ !

ಸಂಧ್ಯೋಪಾಸನೆಯ ಅತಿ ಮುಖ್ಯ ಭಾಗವು ಗಾಯತ್ರೀ ಜಪ. ನಮಗೆ ಗಾಯತ್ರಿಗಿಂತ ಶ್ರೇಷ್ಠ ಮಂತ್ರ ಬೇರೆ ಇಲ್ಲ. ಅದು ವೇದದ ಮಾತೆ; ಜಗನ್ಮಾತೆ; ಬ್ರಹ್ಮ ಮೊದಲಾದ ದೇವರುಗಳಿಂದಲೂ ಸಂಧ್ಯಾ ಕಾಲದಲ್ಲಿ ಜಪಿಸಲ್ಪಡುವ ಮಹಾ ಮಂತ್ರ. ನಮಗೀಗ ಅದರ ಜಪಕ್ಕೆ ಅಧಿಕಾರ ಸಿಕ್ಕಿದ್ದು ಹಲವು ಜನ್ಮಗಳ ಸಾಧನಾ ಫಲವಾಗಿ. ಇಂಥ ಮಹತ್ತುಳ್ಳ ಯೋಗ್ಯತೆಯಿರುವವರು ಲೋಕದಲ್ಲಿ ಸಾವಿರಕ್ಕೊಬ್ಬರು ಮಾತ್ರ ! ಬ್ರಾಹ್ಮಣ್ಯ ಬರುವುದು ಕೇವಲ ತಂದೆ ತಾಯಿಗಳಿಂದಲ್ಲ. ಸಕಾಲದಲ್ಲಿ ಶಾಸ್ತ್ರೋಕ್ತವಾಗಿ ಮಾಡಿದ ಉಪನಯನದಲ್ಲಿ ಗಾಯತ್ರೀ ದೇವಿಯಿಂದಲೇ ನಮಗೆ ನಿಜವಾದ ಬ್ರಾಹ್ಮಣ್ಯ ಬರುತ್ತದೆ.

"ಜಪ ಮಾಡುವವನನ್ನು ನಾನು ಕಾಪಾಡುತ್ತೇನೆ" ಎಂದು ಗಾಯತ್ರೀದೇವಿಯ ಅಭಯವಾಕ್ಯವಿದೆ. ಶ್ರದ್ಧೆಯಿಂದ ಜಪ ಮಾಡಿದವನಿಗೆ ಅವಳು ಬುದ್ಧಿಶಕ್ತಿ, ಆರೋಗ್ಯ. ಆಯುಷ್ಯ, ಧೈರ್ಯ, ಮನಸ್ಸಿನ ತುಷ್ಟಿ, ಕುಟುಂಬ ಸುಖ, ತುಂಬಾ ಧಾರ್ಮಿಕ ಶಕ್ತಿ, ಮುಂದೆ ಅತ್ಯುತ್ತಮ ಜನ್ಮ ಕೊಡುತ್ತಾಳೆ. ತೀರಾ ಚಿಕ್ಕದಾದ ನಮ್ಮ ಬ್ರಾಹ್ಮಣ ಸಮಾಜವು ಹಲವು ಸಾವಿರ ವರ್ಷಕಾಲ ಈ ದೇಶದ ಧಾರ್ಮಿಕ ಸಂಸ್ಕೃತಿಯ ಮೇಲೆ ಅಪಾರ ವರ್ಚಸ್ಸನ್ನು ಬೀರಿದುದು ಅವಳ ಬೆಂಬಲದಿಂದಾಗಿ. ಇದನ್ನು ನೆನಪಿಗೆ ತಂದುಕೊಂಡು ಬ್ರಾಹ್ಮಣರು ಈಗಲೂ ತಮ್ಮ ಜೀವನದ ಸಮಸ್ಯೆ ಬಗೆಹರಿಸಲು ಅಲ್ಪರಿಗೆ ಶರಣು ಹೋಗುವ ಬಗ್ಗೆ, ಅಧಾರ್ಮಿಕ ಜೀವನ ಕ್ರಮಗಳನ್ನನುಸರಿಸುವ ಬಗ್ಗೆ, ಆ ಸರ್ವಶಕ್ತಳ ಸಹಾಯ ಪಡೆಯುವುದೇ ಅತ್ಯುತ್ತಮ ದಾರಿ.

ಬ್ರಾಹ್ಮಣರಿಗೆ ಗಾಯತ್ರಿಯಂಥ ಶ್ರೇಷ್ಠ ಮಂತ್ರವು ಅನಾಯಾಸವಾಗಿ ಲಭಿಸಲಿಕ್ಕೂ, ಗಾಯತ್ರೀದೇವಿಯು ಅವರಿಗೆ ಬ್ರಾಹ್ಮಣ್ಯ ಕೊಟ್ಟು ವಿಶೇಷ ವಾತ್ಸಲ್ಯ ತೋರಿಸಲಿಕ್ಕೂ, ಕಾರಣವನ್ನು ಪ್ರತಿ ಬ್ರಾಹ್ಮಣನೂ ಅಗತ್ಯವಾಗಿ ತಿಳಿದಿರಬೇಕು. ನಮ್ಮ ಶಾಸ್ತ್ರದ ಹೇಳಿಕೆಯಂತೆ ಧರ್ಮದ ಪ್ರಚಾರ ಬ್ರಾಹ್ಮಣರಿಂದ ನಡೆಯಬೇಕಾದುದು. ಯುದ್ಧಕ್ಕೆ ಉತ್ತಮ

ಯೋಧರನ್ನು ಪ್ರೋತ್ಸಾಹಿಸಿ ಸೈನ್ಯಕ್ಕೆ ಸೇರಿಸಿಕೊಂಡಂತೆ, ಧೀಶಕ್ತಿ ಪ್ರೇರಿಸುವ ಗಾಯತ್ರಿಯು ನಮಗೆ ಬ್ರಾಹ್ಮಣ್ಯಕೊಟ್ಟು ತನ್ನ ಧರ್ಮ ಪ್ರಚಾರದ ಪಡೆಗೆ ಸೇರಿಸಿಕೊಂಡಿದ್ದಾಳೆ. ತುಂಬಾ ಜಪ ಮಾಡಿ ಧಾರ್ಮಿಕಶಕ್ತಿ ಬೆಳೆಸಿಕೊಂಡು ಧಾರಾಳವಾಗಿ ಧರ್ಮಪ್ರಚಾರ ಮಾಡಲಿ; ಆದರ್ಶ ಧಾರ್ಮಿಕ ಜೀವನ ನಡೆಸಿ ತಮ್ಮ ಪ್ರೇರಣಶಕ್ತಿಯಿಂದ ಇತರರನ್ನು ಆ ತರದ ಜೀವನಕ್ಕೆ ಪ್ರೇರಿಸಲಿ, ತನ್ಮೂಲಕ ಧರ್ಮ ಬಾಳಲಿ, ಎಂಬುದು ಅವಳ ಉದ್ದೇಶ. ಹೊರತು ಜಪ ಮಾಡಿದವರ ಪೀಳಿಗೆಯಲ್ಲಿ ಹುಟ್ಟಿ ರಕ್ತಾನುಗತವಾಗಿ ಬಂದ ಹೆಚ್ಚಿನ ಬುದ್ಧಿಶಕ್ತಿಯ ಸಹಾಯದಿಂದ ಪ್ರಸಿದ್ಧ ವಕೀಲನಾಗಿಯೋ, ಹೋಟೆಲು ಮಾಲಕನಾಗಿಯೋ, ವ್ಯಾಪಾರಿಯಾಗಿಯೋ ಐ. ಎ. ಯಸ್. ಪಾಸಾಗಿಯೋ, ಕಾದಂಬರಿ ಬರೆದೋ ವಿಪರೀತ ಹಣ ಸಂಪಾದಿಸಿ, ಜಪ ಬಿಟ್ಟು ಸ್ವಾರ್ಥ ಜೀವಿಯಾಗಿ ಬಾಳಲಿ ಎಂಬುದು ಅವಳ ಉದ್ದೇಶವಲ್ಲ. ಗಾಯತ್ರಿಯ ಕೃಪೆಯಿಂದ ಹೀಗೆ ಬ್ರಾಹ್ಮಣ್ಯ ಪಡೆದವನು ಜಪ ಬಿಟ್ಟರೆ ಅವನ ಬ್ರಾಹ್ಮಣ್ಯ ನಾಶವಾಗಿ ಶೂದ್ರನಾಗುತ್ತಾನೆ; ನಂತರ ನರಕಯಾತನೆ ಹೊಂದುತ್ತಾನೆ; ಆ ಮೇಲೆ ನಾಯಿಯ ಜನ್ಮ ಪಡೆಯುತ್ತಾನೆ; ಎನ್ನುತ್ತದೆ ಶಾಸ್ತ್ರ.

ಇದು ಪ್ರತಿ ಬ್ರಾಹ್ಮಣನೂ ತುಂಬಾ ಯೋಚಿಸಬೇಕಾದ ವಿಚಾರ. ಜಪ ಬಿಟ್ಟು ಶೂದ್ರತ್ವ ಪಡೆದವನು ನಡೆಸುವ ಮಗನ ಉಪನಯನ, ಮಗಳ ಮದುವೆ, ಪಿತೃಗಳ ಪ್ರೇತತ್ವ ತಪ್ಪಿಸಲಿಕ್ಕಿರುವ ಅಂತಿಮ ಕ್ರಿಯೆ; ಶ್ರಾದ್ಧ ಮುಂತಾದ ವೈದಿಕ ಕರ್ಮಗಳು ಅವನ ಶೂದ್ರತ್ವದಿಂದಾಗಿ ಫಲ ಕೊಡಲಾರವು ಎಂದು ಶಾಸ್ತ್ರ ಹೇಳುತ್ತದೆ. ಎಂದರೆ ಅವನು ಕೆಟ್ಟು ತನ್ನ ಬ್ರಾಹ್ಮಣ್ಯ ನಂಬಿ ಬಂದ ಹೆಂಡತಿಯ, ತನ್ನನ್ನು ಕಷ್ಟಪಟ್ಟು ಬೆಳೆಸಿದ ಪಿತೃಗಳ, ತನ್ನ ಪ್ರೀತಿಯ ಮಕ್ಕಳ ಧರ್ಮವನ್ನೂ ಕೆಡಿಸುತ್ತಾನೆ. ಇತರ ರೀತಿಗಳಲ್ಲಿ ಅವರೆಲ್ಲರ ಆರೈಕೆಗೆ ತುಂಬಾ ಶ್ರಮಿಸುವ ಅವನು ದಿನಕ್ಕೆರಡು ಬಾರಿ ಕೇವಲ 10ಮಿನಿಟು ಜಪ ಮಾಡದೆ, ಅವರ ಅವನತಿ ಉಂಟು ಮಾಡುವುದು ಎಂಥ ಮೂರ್ಖತನ ! ಸಮಯ ಸಾಲದೆ ? ನಮಗೆ ದಿನದ ಎಚ್ಚರ ಕಾಲದ ಖರ್ಚಿಗೆ 1000ಮಿನಿಟು ಇಲ್ಲವೇ? ಅವನು ಅಷ್ಟೊಂದು ಮಟ್ಟಿಗೆ ತನ್ನ ಮರ್ಕಟ ಮನಸ್ಸಿನ ಗುಲಾಮನಾಗಬೇಕೆ ? ಅಂಥವನಿಗೆ ಮಕ್ಕಳನ್ನು ತಿದ್ದುವ ಅರ್ಹತೆ ಸಾಕೇ ?

ಪಾಪ ಮಾಡಿದವನಿಗೆ ನಾಯಿ, ಹಂದಿ ಮುಂತಾದ ಜನ್ಮ ಬರುತ್ತದೆ. ಎಂದು ವೇದವೇ ಹೇಳುತ್ತದೆ. ಈ ಕಾಲದಲ್ಲಿ ಪತ್ರಿಕೆಗಳಲ್ಲಿ ಕೆಲವು ವೇಳೆ ಬಂದ ಪುನರ್ಜನ್ಮದ ಕತೆಗಳಲ್ಲಿ ಮನುಷ್ಯನು ಪ್ರಾಣಿಜನ್ಮ ಪಡೆದ ಕತೆಗಳೂ ಇವೆ. ಜನರಿಗೀಗ ಧರ್ಮದ ಧಿಕ್ಕಾರ ಸುಲಭ ತೋರುತ್ತದೆ. ಆದರೆ ಸತ್ತ ಮೇಲೆ ಸರ್ವ ಸಮರ್ಥ ವಿಶ್ವಧರ್ಮದ ಕೈಯಿಂದ ಅವರು ಬಿಡುಗಡೆ ಹೊಂದುವುದೆಂಬುದುಂಟೆ ? ಅಪರಿಮಿತ ಸೂರ್ಯಮಂಡಲಗಳುಳ್ಳ ವಿಶ್ವವನ್ನು ಕೋಟ್ಯಾನುಕೋಟಿ ವರ್ಷ ಕಾಲ ಪಾಲಿಸುತ್ತ ಬಂದ ಅನಂತ ಶಕ್ತಿಯುಳ್ಳ ಧರ್ಮದ ಧಿಕ್ಕಾರ ಕೇವಲ ಮೂರ್ಖತನ. "ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ"; ಎಂದರೆ ತನ್ನ ಧರ್ಮವನ್ನು ನಾಶಮಾಡಿಕೊಂಡವನನ್ನು ಅದು ನಾಶ ಮಾಡುತ್ತದೆ; ಅದನ್ನು ರಕ್ಷಿಸಿದವನನ್ನು ಅದು ರಕ್ಷಿಸುತ್ತದೆ. ಜೈಲು ಶಿಕ್ಷೆ ಎಂದರೆ ಎಷ್ಟಕ್ಕೂ ಬೆದರುವ ನಾವು ಮುಂದೆ ಕಾದಿರುವ ಭಯಂಕರ ತರದ್ದಾದ ಮೂಕನಾಯಿಯ ಜನ್ಮಕ್ಕೆ ಎಷ್ಟೋ ಹೆಚ್ಚು ಹೆದರಬೇಡವೇ?

ನೆಹರೂ ಕಾಲದಿಂದ ನಮ್ಮ ರಾಜಕೀಯ ಪ್ರತಿನಿಧಿಗಳು ಜಾತಿ ನಾಶವಾಗಬೇಕು ಎಂದರೆ ಬ್ರಾಹ್ಮಣ್ಯ ನಾಶವಾಗಬೇಕು, ಎಂದು ಸಾರುತ್ತಲೇ ಇದ್ದಾರೆ; ತನ್ಮೂಲಕ ಅಪಾರ ಸಂಖ್ಯೆಯ ಬ್ರಾಹ್ಮಣ ಯುವಕರನ್ನು ಈಗಾಗಲೇ ಧರ್ಮಭ್ರಷ್ಟರನ್ನಾಗಿ ಮಾಡಿದ್ದಾರೆ. ಆದರೆ ಈ ಪ್ರತಿನಿಧಿಗಳನ್ನು ಜನರು ಆರಿಸಿದ್ದು ಕೇವಲ ರಾಜಕೀಯ ಕ್ಷೇತ್ರಕ್ಕೆ; ಧಾರ್ಮಿಕ ಕ್ಷೇತ್ರಕ್ಕಲ್ಲ. ಅವರು ನಮ್ಮ ಧರ್ಮ ಬೇಡವಾದವರು; ಅದನ್ನು ಸರಿಯಾಗಿ ಅಭ್ಯಾಸಿಸದವರು; ಅದರ ಮಹತ್ತು ತಿಳಿಯದವರು. ಅವರು ನಮ್ಮ ಧಾರ್ಮಿಕ ಪ್ರತಿನಿಧಿಗಳಲ್ಲ. ಅದಕ್ಕೆ ಅವರಲ್ಲಿ ಎಷ್ಟಕ್ಕೂ ಯೋಗ್ಯತೆಯಿಲ್ಲ. ಪ್ರಜಾಪ್ರಭುತ್ವವಿರುವ ಇತರ ಎಲ್ಲೆಲ್ಲೂ ಕೇವಲ ರಾಜಕೀಯ ರಂಗಕ್ಕೆ ಆಸರಿಲ್ಪಟ್ಟವರು ಧಾರ್ಮಿಕ ಕ್ಷೇತ್ರಕ್ಕೆ ಕೈ ಹಾಕುವುದೆಂಬುದಿಲ್ಲ. ಹಾಗೆ ಮಾಡುವುದು ತೀರಾ ಅನ್ಯಾಯ; ಅನರ್ಥಕ್ಕೆ ಕಾರಣ. ಜಡ್ಜನು ಎಷ್ಟೇ ಬುದ್ಧಿವಂತನಿದ್ದರೂ ಶಸ್ತ್ರ ಚಿಕಿತ್ಸೆ ನಡೆಸಲು ಹೋಗುತ್ತಾನೆಯೇ ! ಅದಕ್ಕೆ ಸರ್ಜನನೇ ಬೇಕಲ್ಲವೇ ? ಹಿಂದುಗಳಲ್ಲಿ ಒಗ್ಗಟ್ಟಿಲ್ಲವೆಂಬುದರಿಂದ ಮಾತ್ರ ಇವರ ಈ ಅನಾಚಾರ ನಡೆಯುತ್ತದೆ ಇದರ ಪರಿಣಾಮವಾಗಿ ಭೂಲೋಕದ ಅತ್ಯಂತ ಧಾರ್ಮಿಕ ದೇಶದಲ್ಲಿ ಕೇವಲ 23 ವರ್ಷಗಳಲ್ಲಿ

ನಮ್ಮ ಧರ್ಮ ಬೇಡವಾದ ಸರಕಾರದಿಂದಾಗಿ, ಎಷ್ಟೆಲ್ಲ ಶೀಲದ ನಾಶ ನಡೆದಿದೆ ! ಸ್ವಾರ್ಥಪರತೆ ಬೆಳೆದಿದೆ ! ಪಾಪದ ಭೀತಿ ಇಲ್ಲದಾಗಿದೆ ! ಸಹನೆ ಉದಾರತೆ ಗುರುಭಕ್ತಿ ಮಾಯವಾಗಿವೆ !

ತಮ್ಮ ಅಲ್ಪ ಸ್ವಲ್ಪ ಧರ್ಮಾಚರಣೆಗಳನ್ನು ರಕ್ಷಿಸುವ ಪ್ರತಿ ಕ್ರಿಶ್ಚನನಿಗೆ ನಮ್ಮ ದೇಶವೆಲ್ಲ ಕ್ರಿಶ್ಚನ್ ಆಗಬೇಕೆಂಬ ಉತ್ಸಾಹವಿದೆ. ಪ್ರತಿ ಮುಸಲ್ಮಾನನಿಗೆ ನಮ್ಮ ಇಡೀ ದೇಶವೆಲ್ಲ ಇಸ್ಲಾಮ್ ಆಗಬೇಕೆಂಬ ಬಯಕೆ ಇದೆ. ಆದರೆ ನಮ್ಮ ರಾಜಕೀಯ ಮುಖಂಡರ ಹಾಳು ಭೋಧನೆಯಿಂದಾಗಿ ಹಿಂದೂ ಯುವಕರಿಗೆ ಮಾತ್ರ ತಮ್ಮ ಪವಿತ್ರ ಧರ್ಮದ ಬಗ್ಗೆ ಸಂಪೂರ್ಣ ತಾತ್ಸಾರ ! ಜಾತಿಯ ಆಚಾರಗಳು ಬೇಡ, ಕಾರ್ಖಾನೆಗಳೇ ನಮ್ಮ ದೇವರು, ಎಂಬ ಮುಂತಾದ ಇವರ ಹಾಳು ಪ್ರಚಾರದ ಪರಿಣಾಮ ನಮ್ಮ ಧರ್ಮವನ್ನು ಎಂಥ ಭಯಂಕರ ಪರಿಸ್ಥಿತಿಗೆ ತಂದಿದೆ ! ಮಕ್ಕಳ ಮಟ್ಟದಲ್ಲಿ ಜಾತಿಯ ಆಚಾರಗಳ ಅಭ್ಯಾಸವೇ ಧರ್ಮದ ಅಭ್ಯಾಸ. ಆದ್ದರಿಂದಲೇ ಆಚಾರ ಬಿಟ್ಟ ಮಕ್ಕಳಿಗೆ ಹಿಂದೂ ಧರ್ಮವೇ ಬೇಡವಾಗುತ್ತಿದೆ !

ಆದ್ದರಿಂದ ಜಾತಿ ಬೇಡ ಎನ್ನುವ ಭೋಧನೆಗೆ ಎಷ್ಟಕ್ಕೂ ಲಕ್ಷ್ಯ ಕೊಡಬೇಡಿರಿ. ನಮಗೆ ಹಿಂದೂ ಧರ್ಮ ಪ್ರಿಯವಾಗಲಿ. ಆದರ ಉದ್ಧಾರಕ್ಕೆ ಸಹಾಯ ಮಾಡುವವರಿಗೆ ಮಾತ್ರ ನಮ್ಮ ವೋಟು, ಬೆಂಬಲ, ಮೀಸಲಾಗಲಿ. ಹಿಂದೂ ಧರ್ಮ ಇಹಕ್ಕೂ ಪರಕ್ಕೂ ನಮ್ಮ ಮಾತೆ. ಅದಕ್ಕೆ ಈಗ ಅಪಾರ ಹಾನಿಯಾಗುತ್ತಿರುವುದು ನಿಮಗೆ ಕಾಣುವುದಿಲ್ಲವೇ ? ನಾವಾಯಿತು, ನಮ್ಮ ಪಾಡಾಯಿತು, ಎಂಬ ಪ್ರತಿ ಹಿಂದೂವಿನ ಅತ್ಯಂತ ಸಂಕೋಚ ಭಾವನೆ ಇನ್ನಾದರೂ ತ್ಯಜಿಸಿರಿ.

ಮಕ್ಕಳಿಗಾಗಿ ಜೀವ ಸವೆಯುವ ತಂದೆ ಸ್ವಲ್ಪ ಯೋಚಿಸಬೇಕು. ಪಾಶ್ಚಾತ್ಯರಲ್ಲಿ ಮುದಿ ತಂದೆ ತಾಯಿಗಳು ಯಾರಿಗೂ ಬೇಡವಾಗಿದ್ದಾರೆ. ಅವರು ಮಾನವ ಪ್ರೀತಿಯ ತುಣುಕನ್ನೂ ಕಾಣದ ಸರಕಾರೀ ದೊಡ್ಡಿಗಳಲ್ಲಿ ಅಥವಾ ವ್ಯಾಪಾರೀ ಹೋಟೆಲುಗಳಲ್ಲಿ ಭಯಂಕರ ಮಟ್ಟದ ಒಕ್ಕುಂಟೇ ಜೀವನವನ್ನು ನಿರ್ಗತಿಕ ನಾಯಿಗಳಂತೆ ಕಳೆಯುತ್ತಾರೆ. ದೇವರು ಇಲ್ಲದ ವಿದ್ಯೆ, ಆಚಾರ ಹೀನ ಮಿಶ್ರ ಹೊಸ್ಟೆಲ್ ಜೀವನ, ಎಲ್ಲಿ ಕಂಡರೂ ಸರಕಾರವು ಬೆಳೆಸಿರುವ ಸ್ವಾರ್ಥಪರತೆಯ ದೃಷ್ಟಾಂತ, ಇವುಗಳಿಂದಾಗಿ ಮಕ್ಕಳು, ಹದ್ದುಗಳಂತೆ ರೆಕ್ಕೆ ಬಲವಾಗುವವರೆಗೆ ಮಾತ್ರ ತಂದೆತಾಯಿ

ಗಳಲ್ಲಿ ಪ್ರೀತಿ ತೋರಿಸಿ, ಅನಂತರ ಅವರಿಂದ ದೂರವಾಗುವ ಅಸಹ್ಯ ವರ್ತನೆ ನಮ್ಮಲ್ಲೂ ಆರಂಭಿಸಿದೆ. ಮಕ್ಕಳು ಯಾರ್ಯಾರನ್ನೋ ಮದುವೆ ಯಾಗಿ ತಂದೆತಾಯಿಗಳ ಸೇವೆಯ ಜವಾಬ್ದಾರಿಕೆ ಧಿಕ್ಕರಿಸಿ, ಭಯಂಕರ ಕೃತಘ್ನತಾ ಪಾಪ ಕಟ್ಟಿಕೊಳ್ಳುವುದೂ ಉಂಟು. ನಮ್ಮ ಸರಕಾರಕ್ಕೂ ಇದೇ ಬೇಕಾಗಿದೆ.! ನಮ್ಮ ಧರ್ಮ ಭೋಧಿಸುವ "ಮಾತೃ ದೇವೋ ಭವ" ಅಲ್ಲ; ಶ್ರೀರಾಮನ ಪಿತೃಭಕ್ತಿಯ ಆದರ್ಶವಲ್ಲ. ಇದು ಬೆಳೆದಂತೆ ನಮ್ಮ ಮುದುಕರ ಅವಸ್ಥೆ ಭಯಂಕರವಾಗದಿರದು. ನಿಮ್ಮ ಮಗನನ್ನು ನಿಮ್ಮವ ನನ್ನಾಗಿ ಉಳಿಸಿಕೊಳ್ಳಬೇಕಾದರೆ ತಪ್ಪದೆ ಜಪ ಮಾಡಿರಿ; ಮನೆಯಲ್ಲಿ ದೇವರಿಗೆ ಸ್ಥಾನಕೊಟ್ಟು ಮಕ್ಕಳಲ್ಲಿ ಧರ್ಮದ ಭಾವನೆ ಬೆಳೆಸಿರಿ; ಮಕ್ಕಳಿಂದ ತಪ್ಪದೆ ಜಪಮಾಡಿಸಿರಿ. ಅಚಾರಹೀನ ಮಿಶ್ರ ಹೋಸ್ಟೆಲಿಂದ ದೂರ ಇರಿಸಿ. ಆಹಾರದ ಪರಿಶುದ್ಧತೆ ಕಾಪಾಡಿರಿ. ಮೂಲ ಭಂಡವಾಳವೇ ನಾಶವಾಗುವ ವ್ಯಾಪಾರದಂಥ ಧರ್ಮಹೀನ ಮಗನ ಸಾಕುವಿಕೆ ನಡೆಸದಿದ್ದರೇನು? ಮಗ ನಿಗೆ ಆರ್ಥಿಕತೆ ಪಿತ್ರಾರ್ಜಿತವಲ್ಲ; ದೇವರಲ್ಲಿ ಶ್ರದ್ಧೆ ಬರುವಂತೆ ಮಾಡುವುದೇ ಅತ್ಯಂತ ದೊಡ್ಡ ಪಿತ್ರಾರ್ಜಿತ.

ಬ್ರಾಹ್ಮಣರಿಗೆ ಧರ್ಮದ ರಕ್ಷಣೆಯ ಹೊಣೆ ಬಹಳ ಹೆಚ್ಚು. ನಮ್ಮ ಕಾಲದಲ್ಲಿ ಧರ್ಮ ಇಷ್ಟೆಲ್ಲ ಹಾಳು ಮಾಡಲು ಬಿಟ್ಟುದರ ಪಾಪ ನಮ್ಮ ತಲೆಯ ಮೇಲೆ ಬಾರದೆ? ಇನ್ನಾದರೂ ಧರ್ಮದ ಉತ್ತಮ ಅಭ್ಯಾಸಕ್ಕೆ ಆದರ ಧಾರಾಳ ಸೇವೆಗೆ, ಸೊಂಟ ಕಟ್ಟುವ. ನಮ್ಮ ಅಪಾರ ಉದಾಸೀ ನತೆ, ಆಲಸ್ಯ, ತೀರಾ ಪಾಪಕರ ಎಂದು ಶಾಸ್ತ್ರ ಹೇಳುತ್ತದೆ. ಕೆಲವರು, ಬ್ರಾಹ್ಮಣ ಜನ್ಮವೆಂಬುದು ಕೇವಲ ಆಕಸ್ಮಾತ್ತು, ಆದಕ್ಕೆ ಅರ್ಥವಿಲ್ಲ ಎಂದು ಭೋಧಿಸುವುದುಂಟು. ಎಂದರೆ ದೇವರ ಸರಕಾರದಲ್ಲೂ ಅವ್ಯ ವಸ್ಥೆಯೇ ? ನಮಗೆ ಉತ್ತಮ ಬ್ರಾಹ್ಮಣನ ಮನೆಯಲ್ಲಿ ಜನ್ಮವನ್ನು ದೇವರು ಬೇಕೆಂದೇ ಕೊಟ್ಟಿರುವನು ಎಂಬ ಶ್ರದ್ಧೆಯಿದ್ದರೆ ಮೇಲಕ್ಕೇರಲು ಬೇಕಾದ ಉತ್ತಮ ಧಾರ್ಮಿಕ ಆಚರಣೆಗಳ ಅಭ್ಯಾಸ ಸುಲಭವಾಗುತ್ತದೆ. ಜೀವನದ ಫಲತೆಗೆ ಉತ್ತಮ ಧ್ಯೇಯ ಬೇಕು. ನಮಗೆ ಬ್ರಾಹ್ಮಣ್ಯದಲ್ಲಿ ನಂಬಿಕೆಯು ಂತಹ ಧ್ಯೇಯ ಕೊಡುತ್ತದೆ. ಆದಕ್ಕೆ ಬೆಲೆಕಟ್ಟದಿರುವುದು ಮೂರ್ಖತನ

ಜಪ ಚೆನ್ನಾಗಿ ನಡೆಸಲು ಉತ್ಸಾಹ ತಂದುಕೊಳ್ಳಿರಿ. ಬ್ರಾಹ್ಮಣನಿಗೆ

ಐಶ್ವರ್ಯ ಮುಖ್ಯವಲ್ಲ. ಜಪಕ್ಕೆ ತೊಡಕು ತರುವ ಅಶುದ್ಧ ಆಹಾರ, ಹಾಳು ಓದು, ಸದಾಚಾರಕ್ಕೆ ಅನುಕೂಲವಲ್ಲದ ವೃತ್ತಿಗಳು, ಭ್ರಷ್ಟ ಸಂಗಾತಿಗಳಿರುವ ವಾತಾವರಣ, ಮುಂತಾದುವನ್ನು ಖಂಡಿತ ತ್ಯಜಿಸಿರಿ. ಬೇಗ ಬೆಳಿಗ್ಗೆ ಎದ್ದೊಡನೆ ಮಿಂದು ಜಪ ಮಾಡುವುದು ಚೆನ್ನಾಗಿ ಜಪ ನಡೆಸಲು ತುಂಬಾ ಸಹಾಯ. ಬ್ರಾಹ್ಮಣ ಗುಣಗಳಾದ ಸತ್ಯಪರತೆ, ಮನಃಪೂರ್ವಕತೆ, ಸುಲಭ ಜೀವನ, ಪಾಪದ ಭೀತಿ,ದಯೆ ಮುಂತಾದುವನ್ನು ಬೆಳೆಸಿರಿ. ನಿಮ್ಮ ಉದ್ಯೋಗದಲ್ಲಿ, ನಿಮ್ಮ ವರ್ತನೆಯಲ್ಲಿ, ನಿಮ್ಮ ನಡತೆಯಲ್ಲಿ ಇತರರಿಗೆ ಆದರ್ಶವಾಗಿ ಬಾಳಿರಿ. ಲಂಚ, ಮೋಸ, ಅಲ್ಪತೆ, ಕೃತಘ್ನತೆ, ದಕ್ಷತೆಯಿಲ್ಲದ ಕೆಲಸ, ಬ್ರಾಹ್ಮಣರಿಗೆ ಎಷ್ಟಕ್ಕೂ ಬೇಡವಾಗಲಿ. ಬ್ರಾಹ್ಮಣ್ಯದ ಉದ್ಧಾರಕ್ಕೆ ಸಹಾಯ, ಅದರ ಬೆಂಬಲಕ್ಕೆ ತ್ಯಾಗ, ಮಾಡಲು ಕಲಿಯಿರಿ. ನಮ್ಮ ಧರ್ಮ ಬೇಡವಾದವರೂ ಅಪಾರ ಮಟ್ಟದಲ್ಲಿ ಸ್ವಾರ್ಥಿಗಳೂ ಆದವರ ಹಿಂಸೆಯಿಂದ ಸನಾತನ ಧರ್ಮವನ್ನು, ಹಿಂದೂ ಸಂಸ್ಕೃತಿಯನ್ನು, ರಕ್ಷಿಸಲು ಪ್ರತಿ ದಿನ ದೇವರನ್ನು ಪ್ರಾರ್ಥಿಸುವುದೂ ನಮ್ಮ ಕರ್ತವ್ಯವಾಗಲಿ. ಗಾಯತ್ರೀದೇವಿಯು ಬ್ರಾಹ್ಮಣಪ್ರಿಯಳು. ಅವಳು ಮೆಚ್ಚುವಂತೆ ಬಾಳುವ !

ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಎರಡು ಮಾತು

ಜೀವನ ಸುಗಮಮಾಡುವ ವಿದ್ಯೆಕಲಿಯಲಿಕ್ಕೆ ಅತ್ಯುಪಯುಕ್ತ ಸಾಧನ ಬುದ್ಧಿಶಕ್ತಿ. ಅದನ್ನು ಗಾಯತ್ರೀದೇವಿಯು ತನ್ನ ಉಪಾಸಕರಿಗೆ ಕೊಡಬಲ್ಲಳು. ಆದ್ದರಿಂದ ಗಾಯತ್ರೀ ಜಪವನ್ನು ತಪ್ಪದೆ ಮಾಡಿರಿ ಮಂತ್ರದ ಪ್ರತಿ ಶಬ್ದದ ಅರ್ಥಕಲಿತು, ಜಪಮಾಡುವಾಗ ಮನಸ್ಸಿಗೆ ತಂದು ಕೊಳ್ಳಿರಿ. ಏಕಾಗ್ರತೆ ಬೇಕಾದರೆ ದೇವಿಯ ಚಿತ್ರ ಎದುರಿಗೆ ಇಟ್ಟುಕೊಳ್ಳಿರಿ. ತಾಯಿಯೊಡನೆ ಬೇಡಿದಂತೆ ಅವಳೊಡನೆ ಸಮರ್ಥತೆ, ಹಿರಿಮೆಕೊಡಲು ಪ್ರಾರ್ಥಿಸುತ್ತಿರಿ.

ಹೆಚ್ಚಿನ ಹಿಂದೂ ಯುವಕರು ಈ ಕಾಲದಲ್ಲಿ ಹಿಂದೂ ಧರ್ಮದ ಅಪಾರ ಹಿರಿಮೆಯ ವಿಚಾರ ಏನೂ ತಿಳಕೊಳ್ಳದೆ ಅದರ ಬಗ್ಗೆ ತಾತ್ಸಾರ ತೋರಿಸುತ್ತ, ಪಾಶ್ಚಾತ್ಯರ ನಾಗರಿಕತೆಯ ಅನುಕರಣೆ ಮಾಡುತ್ತಿರುವುದು ತೀರಾ ತಪ್ಪು. ಅವರ ವೈಜ್ಞಾನಿಕ ಸಾಧನೆಗಳು ಬಹಳ ವಿಶೇಷ ತರದವು

ಸರಿ. ಜೀವನಕ್ಕೆ ಹಲವು ಅನುಕೂಲತೆಗಳನ್ನು ಕೊಟ್ಟಿವೆ ಸರಿ. ಆದರೆ ನಮ್ಮ ನಿಜಸ್ವರೂಪವಾದ ಆತ್ಮದ ಏಳಿಗೆಗೆ ಅವು ಏನೂ ಮಾಡಲಿಲ್ಲ; ಮಾತ್ರವಲ್ಲ, ಬಹಳ ಕೆಡುಕನ್ನೇ ಉಂಟುಮಾಡಿವೆ. ಆ ನಾಗರಿಕತೆ ಯಾವ ದೇಶದಲ್ಲೂ ಜನರ ನೈತಿಕ ಮಟ್ಟ, ಶೀಲ, ಧಾರ್ಮಿಕ ಜೀವನ, ಸತ್ಯತೆ, ಅಹಿಂಸೆ ಏರಿಸಿದ್ದಿಲ್ಲ. ಅದರ ಬಗ್ಗೆ ಅಮೇರಿಕದ ಅಪಾರ ಕೊಲೆಪಾತಕಗಳನ್ನು, ಸ್ವೀಡನ್ನಿನ ಆತ್ಮಹತ್ಯೆಗಳನ್ನು, ಎಲ್ಲೆಲ್ಲೂ ಕುಡುಕತನವನ್ನು, ಕೇವಲ ಮಕ್ಕಳಲ್ಲಿ ಕೂಡ ವ್ಯಭಿಚಾರವನ್ನು, ಮಾನಸಿಕ ರೋಗಗಳನ್ನು, ಯುದ್ಧದ ಭಯಂಕರ ಕೊಲೆಗಳನ್ನು ವಿಪರೀತ ಏರಿಸಿದ್ದೇ ಕಾಣುತ್ತೇವೆ. ಪಾಶ್ಚಾತ್ಯರ ನಿಕಟ ಅನುಕರಣೆಗೆ ನಾವೇನೂ ಹಿಂದೆ ನಾಗರಿಕತೆ ಇಲ್ಲದ ಕಾಡು ಜನರಾಗಿದ್ದೇವೆ. ? ನಮ್ಮ ನಾಗರಿಕತೆ 10,000 ವರ್ಷ ಬಾಳಿ ಬಂದ ಅಪಾರ ಯೋಗ್ಯತೆಯದು. ಅವರದ್ದು ಕೇವಲ 300 ವರ್ಷಗಳಲ್ಲೇ ವಿನಾಶದ ದಾರಿ ಹಿಡಿದದ್ದೆಂದು ಬಲ್ಲವರು ಹೇಳುವಂತಾದುದು. ಆದ್ದರಿಂದ ಸ್ವಲ್ಪ ವಿವೇಚನೆ ಮಾಡಿರಿ!

ಮದ್ಯಮಾಂಸ ತ್ಯಜಿಸುವ ಶಕ್ತಿ ಬ್ರಾಹ್ಮಣರಿಗೆ ಸುಲಭವಾಗಿ ಬಂದಿದೆ. ಅದರಿಂದ ಪುಣ್ಯ ಬಹಳ. ಅವಕ್ಕೆ ಎಷ್ಟುಕ್ಕೂ ಬಲಿ ಬೀಳಕೂಡದು. ಅವನ್ನು ಉಪಯೋಗಿಸುವವರ ನಿಕಟ ಮೈತ್ರಿ ಬೆಳೆಸಕೂಡದು. ಬ್ರಹ್ಮಚರ್ಯಕ್ಕೆ ನಮ್ಮ ಧರ್ಮ ಅಪಾರ ಬೆಲೆ ಕಟ್ಟುತ್ತದೆ. ಸ್ತ್ರೀಯರ ಸಲುಗೆಯ ಸಂಪರ್ಕ, ಹೊಲಸು ಓದು ಮತ್ತು ಚಿತ್ರಗಳು, ವ್ಯಭಿಚಾರ ಎಲ್ಲ ಹೆಚ್ಚುತ್ತಿರುವ ಈ ಕಾಲದಲ್ಲಿ ಬ್ರಾಹ್ಮಣ ಯುವಕರು ಬಹಳ ಜಾಗ್ರತೆಯಲ್ಲಿರಬೇಕು. ಒಂದು ಹೊಲಸು ಪುಸ್ತಕ ನೂರು ಒಳ್ಳೆಯ ಪುಸ್ತಕಗಳಿಗಿಂತ ಬಲವಂತವಾದುದು. ಉಡಿಗೆಯ ಶೀರಾ ನಿರಾಡಂಬರ ಕ್ರಮ, ಶುದ್ಧ ಆಹಾರ, ಒಬ್ಬನೇ ಮಲಗುವುದು, ಪವಿತ್ರ ತರದ ಓದು ಮುಂತಾದ ಸಹಾಯಕಗಳನ್ನು ಅಗತ್ಯವಾಗಿ ಉಪಯೋಗಿಸಿಕೊಳ್ಳಿರಿ.

ಈ ಕಾಲದಲ್ಲಿ ಪುಸ್ತಕಗಳೂ ಜನಸಾಮಾನ್ಯರ ಓದುವ ಶೀಲವೂ ಬಹಳ ಹೆಚ್ಚುತ್ತಿವೆ. ಓದು ನಾವು ಮನಸ್ಸಿಗೆ ಕೊಡುವ ಆಹಾರ. ದೇಹಕ್ಕೆ ಕೊಡುವ ಆಹಾರವು ಶುದ್ಧವೂ ಹಿತಕರವೂ ಆಗಿರಬೇಕಾದುದು ಹೇಗೆ ಅತ್ಯಾವಶ್ಯಕವೋ ಅಂತೆಯೇ ಮನಸ್ಸಿಗೆ ಕೊಡುವ ಈ ಆಹಾರವೂ ಶುದ್ಧವೂ ಪೌಷ್ಟಿಕವೂ ಆಗಿರಬೇಕಲ್ಲವೇ? ಈಗ ಕೆಟ್ಟ ಓದು ಬಹಳ ಹೆಚ್ಚುತ್ತಿದೆ. ಓದನ್ನು ಅಮೃತ, ಅನ್ನ, ಅಮಲು, ಅಮೇಧ್ಯ ಎಂದು ವರ್ಗೀಕರಿಸ

ಬಹುದು. ನಮ್ಮ ಶಾಸ್ತ್ರ ಗ್ರಂಥಗಳು, ಸಂತರ ಚರಿತ್ರೆಗಳು, ಅವರ ಬೋಧೆ ಮುಂತಾದವು ಪುನಃ ಪುನಃ ಓದಿದಷ್ಟಕ್ಕೂ ನಮ್ಮ ಜೀವನವನ್ನು ಪವಿತ್ರ ಗೊಳಿಸಲಾಪ ಅಮೃತ ತರದ ಓದು. ಅದನ್ನು ನಿತ್ಯವೂ ಸ್ವಲ್ಪವಾಗಿ, ರಜಾಕಾಲದಲ್ಲಿ ಧಾರಾಳವಾಗಿ, ಸೇವಿಸುವುದು ಅಗತ್ಯ. ಲೆಕ್ಕ, ಚರಿತ್ರೆ ಮುಂತಾದ ಓದು ಅನ್ನದಂತೆ ನಮ್ಮ ಜೀವನ ನಡೆಸಲಿಕ್ಕೆ ಅಗತ್ಯವಾದರೂ ಅದರಲ್ಲೇ ಮುಳುಗಿದ್ದು ಅನ್ನದ ರಾಶಿಯು ಅಡಿಬಿದ್ದು ಸಾಯುುವವನಂತಾಗ ಕೂಡದು. ಕತೆ ಕಾದಂಬರಿಗಳಲ್ಲಿ ಬಹು ಹೆಚ್ಚಿನವು ಅಮಲು. ಮದ್ಯವು ದೇಹಕ್ಕೆ ಕೊಟ್ಟ ಅಮಲು ಮಾತ್ರ. ಕತೆ ಕಾದಂಬರಿಗಳಲ್ಲಿ ಬಹು ಹೆಚ್ಚಿನವು ಅಮಲು. ಮದ್ಯವು ದೇಹಕ್ಕೆ ಅಮಲು ಮಾತ್ರ ಕೊಟ್ಟು ಪುಷ್ಟಿಕೊಡದಿರು ವಂತೆ ಕಾದಂಬರಿಗಳು ನಮ್ಮ ಮನಸ್ಸಿಗೆ ಧಾರಾಳವಾಗಿ ಅಮಲನ್ನು ಕೊಡು ತ್ತವೆ. ಆದರೆ ಮನಸ್ಸಿಗೆ ಬೇಕಾದ ಶಕ್ತಿಯನ್ನು ಕೊಡುವುದಿಲ್ಲ. ಅವು ತಮ್ಮ ಸೆಳೆತದಿಂದ ನಮ್ಮ ಅಮೂಲ್ಯ ಸಮಯ ಅಪಹರಿಸುತ್ತದೆ. ಸಾವಿರಾರು ಕಾದಂಬರಿಗಳನ್ನು ಓದುತ್ತಿದ್ದರೂ ಜನರು ಸತ್ಯಪ್ರಿಯತೆ, ಮಾನಸಿಕ ದೃಢತೆ, ಶೀಲ ಮುಂತಾದವನ್ನು ಬೆಳೆಸಿದ್ದೇನೂ ಕಾಣಲಾರೆವು ನಾಲ್ಕನೆ ಯದಾದ ಅಮೇಧ್ಯ ಓದು ಹೊಲಸು ಮಾತ್ರವಲ್ಲ, ವಿಷವೂ ಆಗಬಹುದು. ಕಾಮದ ಭಾವನೆ ತುಂಬಿಸುವ ಪುಸ್ತಕಗಳು, ಧರ್ಮವನ್ನು ನಿಂದಿಸುವ ಪುಸ್ತಕಗಳು, ಜನರಲ್ಲಿ ರೋಷ, ದ್ವೇಷ, ಅಸಮಾಧಾನ, ಕೊಲೆಪಾತಕಗಳ ಭಾವನೆ, ಬೆಳೆಸುವ ಪುಸ್ತಕಗಳು, ಅಸತ್ಯವನ್ನು ಸತ್ಯವಾಗಿ ಚಿತ್ರಿಸಿ ಜನ ರನ್ನು ಬೆರಗುಮಾಡಿ ವಂಚಿಸುವ ಪ್ರಚಾರ ಪುಸ್ತಕಗಳು ಎಲ್ಲವನ್ನು, ಮಲ ವನ್ನು, ವಿಷವನ್ನು ದೂರ ಇಟ್ಟಂತೆ ಇಡಲು ಕಲಿಯಬೇಕು.

ಬ್ರಾಹ್ಮಣನಿಗೆ ಧನವು ಬಹಳ ಪ್ರಧಾನವಾಗಕೂಡದು. ಉದ್ಯೋ ಗಕ್ಕೆಂದು ಯತ್ನಿಸುವಾಗ ಶೂದ್ರಾನ್ನ, ಅದಕ್ಕಿಂತ ಹೆಚ್ಚಾಗಿ ಕ್ರಿಶ್ಚನರ, ಮುಸಲ್ಮಾನರ ಮಿಲಿಟರಿ ಅನ್ನ, ಪುರೋಹಿತರು ದೇವಸ್ಥಾನಗಳು ಇಲ್ಲ ದಲ್ಲಿ ಹುದ್ದೆ, ಅಲ್ಪರ ನಿಕಟ ಸಂಪರ್ಕದಿಂದ ಬಾಳಬೇಕಾದ ಜೀವನ, ನಮ್ಮ ಧರ್ಮಕ್ಕೆ ಬಹಳ ಕೇಡುತರುವ ವೈದ್ಯಕ್ರಮ, ಇವನ್ನು ತ್ಯಜಿಸ ಬೇಕು. ಗುರು, ತಂದೆ ತಾಯಿಗಳನ್ನು ಗೌರವಿಸಬೇಕು. ಇಲ್ಲವಾದರೆ ಬಹಳ ಪಾಪ ಬರುತ್ತದೆ. ಹುದ್ದೆ ಕೊಟ್ಟ ಧನಿಗೆ ಕೇಡು ಬಯಸಕೂಡದು. ಬಹಳ ಜನ್ಮಗಳ ಫಲವಾಗಿ ಬಂದ ಬ್ರಾಹ್ಮಣ್ಯ ಕಾಪಾಡಿಕೊಳ್ಳಿರಿ.

ಕರಾವಳಿ ಗಾಣಿ

ಎಚ್ಚರಿಕೆ !

ಪ್ರತಿ ಬ್ರಾಹ್ಮಣ ಮನೆಯಲ್ಲಿ
ಸಂಧ್ಯೋಪಾಸನೆ ತಪ್ಪದೆ ನಡೆಯಬೇಕು.

ಪ್ರತಿ ಹಿಂದೂ ಮನೆಯಲ್ಲಿ
ದೇವರ ಪೂಜೆ, ದೇವರ ಸ್ತೋತ್ರ ಪಠನ
ತಪ್ಪದೆ ನಡೆಯಬೇಕು.

ಇವಿಲ್ಲದವು ಮನೆಗಳಲ್ಲ. ಕೇವಲ ಭೋಗದ
ಅನುಕೂಲಕ್ಕೆ ಜಾಗಗಳು.

ಅಲ್ಲಿ ಉತ್ತಮ ಮಕ್ಕಳು ಜನಿಸಲಾರವು;
ಬೆಳೆಯಲಾರವು.

ವಿಧೇಯತೆಯಿಲ್ಲದ ಮಕ್ಕಳನ್ನು ಬೆಳೆಸುವುದು
ವ್ಯರ್ಥ ಶ್ರಮ; ಎಲ್ಲರಿಗೂ ಹಾನಿಕರ !